# ಕುವೆಂಪು ವಿಶ್ವವಿದ್ಯಾಲಯ

# *ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳು*

## *ಸಭಾ ದಿನಾಂಕ: 02-12-2023*

**ಪ್ರಾಧಿಕಾರಗಳ ವಿಭಾಗ**

**ಜ್ಞಾನಸಹ್ಯಾದ್ರಿ, ಶಂಕರಘಟ್ಟ – 577 451**

**ಶಿವಮೊಗ್ಗ ಜಿಲ್ಲೆ.**

Scanned with OKEN Scanner

ಫ್ಯಾಕ್ಸ್: 08282-256262
ಇ-ಮೇಲ್:drsyndicateku@gmail.com
☎ 08282-256148 (ಪ್ರಾಧಿಕಾರಗಳ ವಿಭಾಗ)
ವೆಬ್‌ಸೈಟ್:www.kuvempu.ac.in

# ಕುವೆಂಪು ವಿಶ್ವವಿದ್ಯಾಲಯ

ವಿಶ್ವವಿದ್ಯಾಲಯ ಕಾರ್ಯಾಲಯ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ- 577 451

ಸಂಖ್ಯೆ: ಕುವಿ:ಯುಎಟಿ-I:ಸಿಂ-7: 481 :2023-24 ದಿನಾಂಕ:26-12-2023

ಮಾನ್ಯರೆ,

ವಿಷಯ: ದಿನಾಂಕ:02-12-2023 ರಂದು ನಡೆದ ಸಿಂಡಿಕೇಟ್‌ನ ಸಾಮಾನ್ಯ ಸಭೆಯ ನಡಾವಳಿಗಳು.

* * *

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ - 2000ರ ಪ್ರಕರಣ - 29(w)ರ ಪ್ರಕಾರ ರಚಿಸಲಾಗಿರುವ/ ಅನುಸರಿಸಲಾಗುತ್ತಿರುವ ವಿಶ್ವವಿದ್ಯಾಲಯ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು- ಅಧ್ಯಾಯ-I ರ ಪ್ರಕರಣ- ಎ-2 ರನ್ವಯ ದಿನಾಂಕ:02-12-2023 ರಂದು ವಿಶ್ವವಿದ್ಯಾಲಯದ ಆಡಳಿತ ಭವನದ ಮೂರನೇ ಮಹಡಿಯ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ ಸಿಂಡಿಕೇಟ್‌ನ ಸಾಮಾನ್ಯ ಸಭೆಯ ನಡಾವಳಿಗಳನ್ನು ಈ ಮೂಲಕ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ವಿಶ್ವವಿದ್ಯಾಲಯ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು - ಅಧ್ಯಾಯ-Iರ ಪ್ರಕರಣ - 22(1) ರ ಪ್ರಕಾರ ಸದರಿ ನಡಾವಳಿಗಳು ತಲುಪಿದ **07 ದಿನಗಳೊಳಗೆ ತಮ್ಮಿಂದ ನಡಾವಳಿಗಳ ದಾಖಲಾತಿಯ ಬಗ್ಗೆ ಯಾವುದೇ ಆಕ್ಷೇಪಣೆ** ಬಾರದಿದ್ದಲ್ಲಿ ನಡಾವಳಿಗಳ ದಾಖಲಾತಿಯು ಸರಿಯಾಗಿದೆಯೆಂದು ಭಾವಿಸಲಾಗುವುದು.

ತಮ್ಮ ವಿಶ್ವಾಸಿ,

ಕುಲಸಚಿವರು

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ

ಗೆ,

ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ.

ಪ್ರತಿಗಳು:

1) ಮಾನ್ಯ ರಾಜ್ಯಪಾಲರ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯಪಾಲರ ಸಚಿವಾಲಯ, ರಾಜಭವನ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಕರ್ನಾಟಕ ಸರ್ಕಾರದ ಸಚಿವಾಲಯಗಳು ಬಹುಮಹಡಿಗಳ ಕಟ್ಟಡ, ಡಾ.ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು.
3) ಆಯುಕ್ತರು, ಕಾಲೇಜು ಶಿಕ್ಷಣ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ನೃಪತುಂಗ ರಸ್ತೆ, ಬೆಂಗಳೂರು.
4) ಕುಲಸಚಿವರು(ಪರೀಕ್ಷಾಂಗ) ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
5) ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
6) ನಿಕಾಯಗಳ ಡೀನರುಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
7) ಗ್ರಂಥಪಾಲಕರು, ವಿಶ್ವವಿದ್ಯಾಲಯ ಗ್ರಂಥಾಲಯ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
8) ನಿರ್ದೇಶಕರು, ಐ.ಕ್ಯೂ.ಎ.ಸಿ./ಪಿ.ಎಂ.ಇ/ ಸಿ.ಡಿ.ಸಿ/ ಶಾರೀರಿಕ ಶಿಕ್ಷಣ/ ವಿದ್ಯಾರ್ಥಿ ಕ್ಷೇಮಪಾಲನ/ ಪ್ರಸಾರಾಂಗ/ ದೂರ ಶಿಕ್ಷಣ ನಿರ್ದೇಶನಾಲಯ ವಿಭಾಗ, ಮಹಿಳಾ ಅಧ್ಯಯನ ಕೇಂದ್ರ, ಯು.ಸಿ.ಸಿ.ಎಫ್, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
9) **ನಿರ್ದೇಶಕರು / ಜ್ಯೂನಿಯರ್ ಕಂಪ್ಯೂಟರ್ ಪ್ರೋಗ್ರಾಮರ್, ಯು.ಸಿ.ಸಿ.ಎಫ್. ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ - ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಸೇರ್ಪಡಿಸುವುದು.**
10) ಎಲ್ಲಾ ಅಧ್ಯಕ್ಷರು, ಸ್ನಾತಕೋತ್ತರ ಅಧ್ಯಯನ ವಿಭಾಗಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ/ಶಿವಮೊಗ್ಗ/ ಕಡೂರು/ ಚಿಕ್ಕಮಗಳೂರು.
11) ಎಲ್ಲಾ ಉಪಕುಲಸಚಿವರು/ಸಹಾಯಕ ಕುಲಸಚಿವರುಗಳು/ ಶಾಖಾಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ/ಶಿವಮೊಗ್ಗ/ಕಡೂರು.
12) ಪ್ರಾಂಶುಪಾಲರು, ಸಹ್ಯಾದ್ರಿ ಕಲಾ ಕಾಲೇಜು / ಸಹ್ಯಾದ್ರಿ ವಿಜ್ಞಾನ ಕಾಲೇಜು/ ಸಹ್ಯಾದ್ರಿ ವಾಣಿಜ್ಯ ಮತ್ತು ನಿರ್ವಹಣೆ ಕಾಲೇಜು, ಶಿವಮೊಗ್ಗ.
13) ನಿರ್ದೇಶಕರು, ಸ್ನಾತಕೋತ್ತರ ಕೇಂದ್ರ, ಕುವೆಂಪು ವಿಶ್ವವಿದ್ಯಾಲಯ, ಬಿ.ಹೆಚ್ ರಸ್ತೆ ಕಡೂರು.
14) ಸಂಯೋಜನಾಧಿಕಾರಿಗಳು, ಸ್ನಾತಕೋತ್ತರ ಕೇಂದ್ರ, ಐ.ಡಿ.ಎಸ್.ಜಿ ಕಾಲೇಜು ಕಟ್ಟಡ, ಕುವೆಂಪು ವಿಶ್ವವಿದ್ಯಾಲಯ, ಚಿಕ್ಕಮಗಳೂರು.
15) ಸಂಚಾಲಕರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಘಟಕ/ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರ ಘಟಕ, ವಿದ್ಯಾರ್ಥಿಗಳ ಉತ್ತೇಜನ ಸೇವಾ ಕೇಂದ್ರ, ವಿದ್ಯಾರ್ಥಿಗಳ ಸೌಲಭ್ಯ ಸಮುಚ್ಚಯ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
16) ಕಾರ್ಯಪಾಲಕ ಅಭಿಯಂತರರು, ಇಂಜನಿಯರಿಂಗ್ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
17) ಸಾರ್ವಜನಿಕ ಸಂಪರ್ಕಾಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
18) ಆಪ್ತಕಾರ್ಯಾಲಯ ಕುಲಪತಿಗಳು: ಕುಲಸಚಿವರು: ಕುಲಸಚಿವರು(ಮೌಲ್ಯಮಾಪನ):ಹಣಕಾಸು ಅಧಿಕಾರಿಗಳು. ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
19) ಕಛೇರಿ ಪ್ರತಿ / ರಕ್ಷಣಾ ಕಡತ.

PROCEEDINGS COVE LETTER2

Scanned with OKEN Scanner

# ಕುವೆಂಪು ವಿಶ್ವವಿದ್ಯಾಲಯ

ದಿನಾಂಕ:02-12-2023 ರಂದು ಶನಿವಾರ ಪೂರ್ವಾಹ್ನ 11.00 ಗಂಟೆಗೆ **"ಕುವೆಂಪು ಶತಮಾನೋತ್ಸವ ಭವನದ ಹೊಸ ಸಿಂಡಿಕೇಟ್ ಸಭಾಂಗಣ"** ಇಲ್ಲಿ ನಡೆದ **ಸಿಂಡಿಕೇಟ್ ಸಾಮಾನ್ಯ ಸಭೆ"**ಯ ನಡಾವಳಿಗಳು.

**ಹಾಜರಾದ ಸದಸ್ಯರು:**

| | | |
|---|---|---|
| 1. | ಪ್ರೊ. ಎಸ್. ವೆಂಕಟೇಶ, ಕುಲಪತಿಗಳು (ಪ್ರಭಾರ) | ಅಧ್ಯಕ್ಷರು |
| 2. | ಶ್ರೀ ಸ್ನೇಹಲ್ ಸುಧಾಕರ್ ಲೋಖಂಡೆ ಐ.ಎ.ಎಸ್., ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |
| 3. | ಪ್ರೊ. ಗೋಪಿನಾಥ್, ಎಸ್.ಎಂ., ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 4. | ಡಾ. ವಿಷ್ಣುಮೂರ್ತಿ ಕೆ.ಎ, ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತರ ಪ್ರತಿನಿಧಿ | ಸದಸ್ಯರು |
| 5. | ಶ್ರೀ ಶಾಂತಕುಮಾರ್ ಜಿ.ಎಸ್. | ಸದಸ್ಯರು |
| 6. | ಶ್ರೀ ಶಶಿಧರ್ ಬಿ.ಎನ್. | ಸದಸ್ಯರು |
| 7. | ಪ್ರೊ. ಚಂದ್ರಶೇಖರ್ ಕೆ. | ಸದಸ್ಯರು |
| 8. | ಡಾ. ಎ.ಟಿ. ಪದ್ಮೇಗೌಡ, ಪ್ರಾಂಶುಪಾಲರು | ಸದಸ್ಯರು |
| 9. | ಶ್ರೀ ವಿನಯ್‌ಕುಮಾರ್ ಶೆಟ್ಟಿ, ಪ್ರಾಂಶುಪಾಲರು | ಸದಸ್ಯರು |
| 10. | ಡಾ. ಎಂ. ಸ್ವಾಮಿ, ಪ್ರಾಂಶುಪಾಲರು | ಸದಸ್ಯರು |
| 11. | ಡಾ. ಸಂಧ್ಯಾಕಾವೇರಿ ಕೆ, ಪ್ರಾಂಶುಪಾಲರು | ಸದಸ್ಯರು |

**ಗೈರುಹಾಜರಾದ ಸದಸ್ಯರು:**

| | | |
|---|---|---|
| 1. | ನಿರ್ದೇಶಕರು. ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 2. | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 3. | ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 4. | ಆಯುಕ್ತರು, ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು. | ಸದಸ್ಯರು |

**ಪೂರ್ವಾನುಮತಿಯೊಂದಿಗೆ ಗೈರು ಹಾಜರಾದ ಸದಸ್ಯರು:**

ಯಾರು ಇರುವುದಿಲ್ಲ.

**ಪ್ರಸ್ತಾವನೆ:** ಪ್ರಾರಂಭದಲ್ಲಿ ಸಭೆಗೆ ಆಗಮಿಸಿದ ಸದಸ್ಯರುಗಳೆಲ್ಲರಿಗೂ ಮಾನ್ಯ ಕುಲಸಚಿವರು ಆತ್ಮೀಯವಾಗಿ ಸ್ವಾಗತ ಕೋರಿದರು. ಕುಲಪತಿಯವರು ಪ್ರಾಸ್ತಾವಿಕವಾಗಿ ಮಾತನಾಡುತ್ತಾ 2023-24ನೇ ಸಾಲಿನ ಸ್ನಾತಕೋತ್ತರ ಕೋರ್ಸ್‌ಗಳ ಪ್ರವೇಶ ಪ್ರಕ್ರಿಯೆ ಯಶಸ್ವಿಯಾಗಿ ನಡೆದಿದೆ. ಕೆಲವು ವಿಭಾಗಗಳಲ್ಲಿನ ಸ್ಥಾನಗಳು ಪೂರ್ಣಪ್ರಮಾಣದಲ್ಲಿ ಭರ್ತಿಯಾಗದ ಕಾರಣದಿಂದಾಗಿ ಅವರಿಗೆ ಪ್ರವೇಶಾತಿ ದಿನಾಂಕವನ್ನು 05-12-2023 ರವರೆಗೆ ವಿಸ್ತರಿಸಿ ಅವಕಾಶ ಮಾಡಿಕೊಡಲಾಗಿದೆ. ಪ್ರಸ್ತುತ, ವಿಶ್ವವಿದ್ಯಾಯವು ನ್ಯಾಕ್ ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಿದ್ದು, ಇದಕ್ಕೆ ಸಂಬಂಧಪಟ್ಟ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತಿದೆ ಎಂದರು.

ನಂತರ ಕಾರ್ಯಸೂಚಿಯನ್ವಯ ವಿಷಯಗಳನ್ನು ಕೈಗೆತ್ತಿಕೊಳ್ಳಲಾಯಿತು.

## ಪ್ರಾಧಿಕಾರ ವಿಭಾಗ

**2023-ಸಿಂ-7.01:** ದಿನಾಂಕ:22-09-2023 ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳ ದೃಢೀಕರಣ.

**ಚರ್ಚೆ:** ದಿನಾಂಕ:22-09-2023ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ವಿಷಯ ಸಂಖ್ಯೆ: 2023-ಸಿಂ-6.12(2) ಕುರಿತು ಸದಸ್ಯರಾದ ಡಾ.ಎಂ.ಸ್ವಾಮಿರವರು ಮಾತನಾಡಿ ರಾಜ್ಯಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಡಾ.ಎ. ಷಣ್ಮುಖರವರ ಜಾತಿ ಪ್ರಮಾಣಪತ್ರದ ಕುರಿತು ಪ್ರಕರಣ ನ್ಯಾಯಾಲಯದಲ್ಲಿ ಇತ್ಯರ್ಥವಾಗುವವರೆಗೆ ಯಾವುದೇ ಶೈಕ್ಷಣಿಕ ಜವಾಬ್ದಾರಿ ನೀಡಬಾರದು ಎಂದು ಸಭೆಯಲ್ಲಿ ನಿರ್ಣಯಿಸಲಾಗಿತ್ತು. ಆದರೆ, ಅವರನ್ನು ಸ್ನಾತಕೋತ್ತರ ಪ್ರವೇಶ ಸಮಿತಿಗೆ ಸದಸ್ಯರಾಗಿ ನೇಮಕ



Scanned with OKEN Scanner

ಮಾಡಿದೆ ಎಂದರು. ಮಾನ್ಯ ಕುಲಪತಿಯವರು ಮಾತನಾಡಿ ಪ್ರ... ಸಕ್ಷಮ ಪ್ರಾಧಿಕಾರವಲ್ಲ. ಸ್ನಾತಕೋತ್ತರ ಪ್ರವೇಶಕ್ಕಾಗಿ ವಿದ್ಯಾರ್ಥಿಗಳು ಸಲ್ಲಿಸುವ ಅರ್ಜಿಗಳನ್ನು ಪರಿಶೀಲಿಸಿ ಪಟ್ಟಿ ಸಿದ್ಧಪಡಿಸಿ, ಪ್ರವೇಶ ಪ್ರಕ್ರಿಯೆ ಕೈಗೊಳ್ಳುವ ಜವಾಬ್ದಾರಿ ಇರುತ್ತದೆ ಅಷ್ಟೆ. ವಿಭಾಗದಲ್ಲಿ ಅಧ್ಯಾಪಕರ ಸಂಖ್ಯೆ ಕಡಿಮೆ ಇದೆ. ಆದಾಗ್ಯೂ ಡಾ.ಷಣ್ಮುಖರವರು ಪ್ರವೇಶ ಸಂಬಂಧಿತ ಕೆಲಸಗಳನ್ನು ಕೂಡ ನಿರ್ವಹಿಸಬಾರದು ಎಂದರೆ ಕಷ್ಟವಾಗುತ್ತದೆ ಎಂದರು. ಕುಲಸಚಿವರು ಮಾತನಾಡುತ್ತಾ, ಅವರ ಜಾತಿ ಪ್ರಮಾಣಪತ್ರದ ಪ್ರಕರಣವು ನ್ಯಾಯಾಲಯದಲ್ಲಿರುವುದರಿಂದ, ಇದರ ಕುರಿತಾಗಿ ಸಿಂಡಿಕೇಟ್‌ನಲ್ಲಿ ಯಾವುದೇ ನಿರ್ಣಯಗಳನ್ನು ತೆಗೆದುಕೊಳ್ಳಲು ನಿಯಮಾನುಸಾರ ಅವಕಾಶವಿಲ್ಲ. ಆದುದರಿಂದ, ದಿನಾಂಕ:22-09-2023ರ ಸಭೆಯಲ್ಲಿ ತೆಗೆದುಕೊಂಡ ನಿರ್ಣಯವನ್ನು ಯಥಾವತ್ತಾಗಿ ಹಿಂಪಡೆಯುವುದು ಉತ್ತಮ ಎಂದರು. ಶ್ರೀ ಬಿ.ಎನ್. ಶಶಿಧರ ರವರು ಮಾತನಾಡಿ ಈ ಕುರಿತಾಗಿ ಕಾನೂನು ಅಭಿಪ್ರಾಯ ಪಡೆದುಕೊಳ್ಳುವುದು ಸೂಕ್ತ ಎಂದರು. ಸದಸ್ಯರಾದ ಡಾ.ಎ.ಟಿ.ಪದ್ಮೇಗೌಡರವರು ಮಾತನಾಡಿ ಈ ಪ್ರಕರಣವು 2017ನೇ ಇಸವಿಯಲ್ಲಿಯೇ ನ್ಯಾಯಾಲಯದಲ್ಲಿ ದಾಖಲಾಗಿದ್ದು, ಈಗಾಗಲೇ ಬಹಳ ವರ್ಷವಾಗಿದ್ದು, ಇನ್ನೂ ಇತ್ಯರ್ಥವಾಗಿಲ್ಲ. ಇದನ್ನು ತ್ವರಿತಗೊಳಿಸಲು ಕ್ರಮ ಕೈಗೊಳ್ಳಿ ಎಂದರು. ಕುಲಸಚಿವರು ಮಾತನಾಡಿ, ನ್ಯಾಯಾಲಯದ ಪ್ರಕರಣಗಳನ್ನು ಬೇಗ ಮುಗಿಸಿ ಎಂದು ನಾವು ಹೇಳಲು ಅವಕಾಶವಿಲ್ಲ. ಮುಂದಿನ ವಿಚಾರಣೆ ಜುಲೈ 2024ರಲ್ಲಿದೆ. ಆದಾಗ್ಯೂ ವಿಚಾರಣೆಯ ದಿನಾಂಕವನ್ನು ಹಿಂದೂಡಲು ನ್ಯಾಯಾಲಯಕ್ಕೆ ಮನವಿ ಮಾಡುವಂತೆ ವಿಶ್ವವಿದ್ಯಾಲಯದ ಅಡ್ವೋಕೇಟ್‌ರವರೊಂದಿಗೆ ಚರ್ಚಿಸಲಾಗಿದೆ ಎಂದರು.

**ನಿರ್ಣಯ:** ಸುದೀರ್ಘ ಚರ್ಚೆಯ ನಂತರ, ಡಾ. ಷಣ್ಮುಖ ಎ., ರವರ ಜಾತಿ ಪ್ರಮಾಣ ಪತ್ರದ ಪ್ರಕರಣದ ಕುರಿತಾಗಿ ಪ್ರಕರಣವು ನ್ಯಾಯಾಲಯದಲ್ಲಿರುವುದರಿಂದ ಇದರ ಕುರಿತಾಗಿ ಸಿಂಡಿಕೇಟ್‌ನಲ್ಲಿ ಯಾವುದೇ ನಿರ್ಣಯಗಳನ್ನು ತೆಗೆದುಕೊಳ್ಳಲು ನಿಯಮಾನುಸಾರ ಅವಕಾಶವಿಲ್ಲ. ನ್ಯಾಯಾಲಯದಲ್ಲಿ ಅವರ ಜಾತಿ ಪ್ರಮಾಣ ಪತ್ರದ ಪ್ರಕರಣ ಇತ್ಯರ್ಥವಾಗುವವರೆಗೆ ವಿಶ್ವವಿದ್ಯಾಲಯದ ಶೈಕ್ಷಣಿಕ ಸಭೆ / ಪ್ರಾಧಿಕಾರಗಳ ಸದಸ್ಯತ್ವ ಕುರಿತಾಗಿ ಪರಿಶೀಲಿಸುವುದು ಮತ್ತು ರಾಜ್ಯಶಾಸ್ತ್ರ ವಿಭಾಗದಲ್ಲಿ ಪ್ರೊ. ಚಂದ್ರಶೇಖರ್ ರವರು ಉಳಿದವರ ವಿರುದ್ಧ ಸಲ್ಲಿಸಿರುವ ದೂರುಗಳು ಹಾಗೂ ವಿಭಾಗದ ಉಳಿದವರು ಪ್ರೊ. ಚಂದ್ರಶೇಖರ್ ರವರ ವಿರುದ್ಧ ಸಲ್ಲಿಸಿರುವ ದೂರಗಳ ಸತ್ಯಾಸತ್ಯತೆಯನ್ನು ಪರಿಶೀಲಿಸಿ ವರದಿ ನೀಡಲು ಡೀನರು, ಕಲಾ ನಿಕಾಯ, ಸಿಂಡಿಕೇಟ್ ಸದಸ್ಯರಾದ ಶ್ರೀ ಬಿ.ಎನ್. ಶಶಿಧರ್ ಸೇರಿದಂತೆ ಒಂದು ಸಮಿತಿಯನ್ನು ರಚಿಸಲು ಮಾನ್ಯ ಕುಲಪತಿಯವರಿಗೆ ಅಧಿಕಾರ ನೀಡಲಾಯಿತು.

ವಿಷಯ ಸಂಖ್ಯೆ:2023-ಸಿಂ-6.15ರ ಭದ್ರಾವತಿಯ ಹೆಬ್ಬೂರು ಮಹಾವಿದ್ಯಾಲಯ ಕಲಾ ಮತ್ತು ವಾಣಿಜ್ಯ ಕಾಲೇಜಿನ ಪ್ರಕರಣದ ಕುರಿತು ಸದಸ್ಯರಾದ ಶ್ರೀ ಬಿ.ಎನ್.ಶಶಿಧರರವರು ಮಾತನಾಡಿ, ಸಭೆಯ ನಿರ್ಣಯದ ನಂತರ ಏನು ಬೆಳವಣಿಗೆ ಆಗಿದೆ ಎಂದರು. ಕುಲಸಚಿವರು ಮಾತನಾಡಿ ಸಿಂಡಿಕೇಟ್ ನಿರ್ಣಯದನ್ವಯ ದಂಡ ಶುಲ್ಕ ಒಂದು ಲಕ್ಷ ರೂಪಾಯಿಗಳನ್ನು ಪಾವತಿಸುವಂತೆ ಕಾಲೇಜಿಗೆ ಪತ್ರ ಬರೆಯಲಾಗಿದೆ. ಆದರೆ, ಅವರು ಈವರೆಗೂ ದಂಡಶುಲ್ಕ ಪಾವತಿಸಿಲ್ಲ. ದಂಡ ಶುಲ್ಕದಿಂದ ವಿನಾಯಿತಿ ನೀಡುವಂತೆ ಹಾಗೂ ಕಾಲೇಜಿಗೆ ಸಂಯೋಜನೆ ಮುಂದುವರೆಸಿ ಪ್ರವೇಶ ಮಾಡಿಕೊಳ್ಳಲು ಅವಕಾಶ ನೀಡುವಂತೆ ಕೋರುತ್ತಿದ್ದಾರೆ ಎಂದರು. ಡಾ.ಸಂಧ್ಯಾಕಾವೇರಿರವರು ಮಾತನಾಡಿ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಸಂಯೋಜನೆ ಮುಂದುವರೆಸಬಹುದು ಎಂದರು.

ಚರ್ಚೆಯ ನಂತರ, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಭದ್ರಾವತಿಯ ಹೆಬ್ಬೂರು ಮಹಾವಿದ್ಯಾಲಯ ಕಲಾ ಮತ್ತು ವಾಣಿಜ್ಯ ಕಾಲೇಜಿನ ಸಂಯೋಜನೆಯನ್ನು 2023-24ನೇ ಶೈಕ್ಷಣಿಕ ಸಾಲಿನಲ್ಲಿ ಮುಂದುವರೆಸಲು ಹಾಗೂ ದಂಡಶುಲ್ಕವನ್ನು ಪಾವತಿಸಲು ಕಾಲಾವಕಾಶ ನೀಡಲು ಅನುಮತಿಸಿದ ಸಭೆಯು, ದಂಡಶುಲ್ಕ ಪಾವತಿಸುವವರೆಗೆ ಮುಂದೆ ನಡೆಯುವ ಬೆಸ ಸೆಮಿಸ್ಟರ್ ಪರೀಕ್ಷೆಗಳ ಫಲಿತಾಂಶ ತಡೆಹಿಡಿಯಬೇಕೆಂದು ನಿರ್ಣಯಿಸಲಾಯಿತು.

ನಂತರ, ದಿನಾಂಕ:22-09-2023 ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳನ್ನು ಅನುಮೋದಿಸಿ ದೃಢೀಕರಿಸಲಾಯಿತು.

Scanned with OKEN Scanner

**2023–ಸಿಂ–7.02:** ದಿನಾಂಕ:22–09–2023 ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳು.

**ನಿರ್ಣಯ:** ದಿನಾಂಕ:22–09–2023 ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳನ್ನು ಸಭೆಯು ಪರಿಶೀಲಿಸಿ ಅನುಮೋದಿಸಿತು.

**2023–ಸಿಂ–7.03:** 2022–23ನೇ ಸಾಲಿನ ವಾರ್ಷಿಕ ವರದಿ ಅನುಮೋದನೆ.

**ಚರ್ಚೆ:** ಕುಲಸಚಿವರು ವಿಷಯ ಮಂಡಿಸಿ ಮಾತನಾಡುತ್ತಾ, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ 2000ದ ಪ್ರಕರಣ 50ರ ಪ್ರಕಾರ ಕನ್ನಡ ಹಾಗೂ ಇಂಗ್ಲೀಷ್ ಅವತರಣಿಕೆಯಲ್ಲಿ ಸಿದ್ಧಪಡಿಸಿರುವ ವಿಶ್ವವಿದ್ಯಾಲಯದ 2022–23ನೇ ಸಾಲಿನ ವಾರ್ಷಿಕ ವರದಿಯನ್ನು ಸಕ್ಷಮ ಪ್ರಾಧಿಕಾರಗಳ ಅನುಮೋದನೆ ಪಡೆದುಕೊಂಡು ಸರ್ಕಾರಕ್ಕೆ ಸಲ್ಲಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ ವಾರ್ಷಿಕ ವರದಿಯನ್ನು ದಿನಾಂಕ: 22–11–2023ರಂದು ನಡೆದ ವಿದ್ಯಾವಿಷಯ ಪರಿಷತ್ತಿನ ಸಾಮಾನ್ಯ ಸಭೆಯಲ್ಲಿ ಅನುಮೋದಿಸಲಾಗಿದ್ದು, ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸಿದೆ ಎಂದರು.

**ನಿರ್ಣಯ:** ಚರ್ಚೆಯ ನಂತರ ವಿಶ್ವವಿದ್ಯಾಲಯದ 2022–23ನೇ ಸಾಲಿನ ವಾರ್ಷಿಕ ವರದಿಯನ್ನು ಸಭೆಯು ಅನುಮೋದಿಸಿತು.

## ಮಾನವ ಸಂಪನ್ಮೂಲ ಮತ್ತು ನಿರ್ವಹಣೆ ವಿಭಾಗ

**2023–ಸಿಂ–7.04:** ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ವಿಭಾಗಾಧ್ಯಕ್ಷರನ್ನು ನೇಮಿಸಿರುವುದನ್ನು ಸ್ಥಿರೀಕರಿಸುವ ಕುರಿತು.

**ನಿರ್ಣಯ:** ಕುಲಸಚಿವರು ಮಾತನಾಡುತ್ತಾ, ವಿಶ್ವವಿದ್ಯಾಲಯದ ಈ ಕೆಳಕಂಡ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ವಿಭಾಗಾಧ್ಯಕ್ಷರ ಅವಧಿ ಮುಕ್ತಾಯಗೊಂಡಿರುವ ಹಿನ್ನೆಲೆಯಲ್ಲಿ, ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ ಪ್ರಕರಣ 34(7)ರನ್ವಯ ನೂತನ ವಿಭಾಗಾಧ್ಯಕ್ಷರ ನೇಮಕ ಮಾಡಿರುವುದನ್ನು ಸಭೆಯ ಅನುಮೋದನೆ ಹಾಗೂ ಸ್ಥಿರೀಕರಣಕ್ಕಾಗಿ ಮಂಡಿಸಿದರು. ಸದಸ್ಯರಾದ ಶ್ರೀ ಶಶಿಧರ್, ಬಿ.ಎನ್., ಇವರು ಮಾತನಾಡಿ, ವಿಭಾಗಾಧ್ಯಕ್ಷರ ಮುಕ್ತಾಯದ ಅವಧಿ ಮೊದಲೇ ನಿಗದಿಯಾಗಿರುತ್ತದೆ. ಈ ಹಿನ್ನೆಲೆಯಲ್ಲಿ, ಸಾಕಷ್ಟು ಮುಂಚಿತವಾಗಿಯೇ ಸಿಂಡಿಕೇಟ್ ಸಭೆಯ ಅನುಮೋದನೆಗೆ ಮಂಡಿಸಬೇಕು. ತುರ್ತು ಮತ್ತು ಅನಿವಾರ್ಯ ಹೊರತುಪಡಿಸಿ, ಈ ರೀತಿ ಸ್ಥಿರೀಕರಣಕ್ಕೆ ಸಲ್ಲಿಸುವ ಪದ್ಧತಿ ಒಳ್ಳೆಯದಲ್ಲ. ಈ ಕುರಿತಾಗಿ ಹಿಂದಿನ ಸಭೆಯೊಂದರಲ್ಲಿ ಕೂಡ ಚರ್ಚಿಸಲಾಗಿದೆ. ಇದು ಮತ್ತೆ ಮತ್ತೆ ಪುನರಾವರ್ತನೆ ಆಗಬಾರದು. ಸಿಂಡಿಕೇಟ್ ನಿರ್ಣಯ ತೆಗೆದುಕೊಳ್ಳುವ ಪ್ರಾಧಿಕಾರವಾಗಿದ್ದು, ಎಲ್ಲವನ್ನು ಘಟನೋತ್ತರವಾಗಿ ಅನುಮೋದಿಸುವ ವ್ಯವಸ್ಥೆ ಅಲ್ಲ ಎಂದರು. ಕುಲಪತಿಯವರು ಮಾತನಾಡಿ ಇನ್ನು ಮುಂದೆ ಈ ರೀತಿ ಆಗದಂತೆ ಸೂಚನೆ ನೀಡುವುದಾಗಿ ಸಭೆಗೆ ತಿಳಿಸಿದರು. ಚರ್ಚೆಯ ನಂತರ ಈ ಕೆಳಕಂಡ ವಿಭಾಗಾಧ್ಯಕ್ಷರುಗಳ ನೇಮಕವನ್ನು ಅನುಮೋದಿಸಿ ಸ್ಥಿರೀಕರಿಸಲಾಯಿತು.

| ಕ್ರ ಸಂ. | ಹೆಸರು | ಹುದ್ದೆ | ವಿಭಾಗ |
|---|---|---|---|
| 01 | ಡಾ. ನಾಗ್ಯನಾಯ್ಕ, ಬಿ.ಹೆಚ್. | ಪ್ರಾಧ್ಯಾಪಕರು | ಹಿಂದಿ |
| 02 | ಡಾ. ಗಜಾನನಪ್ರಭು, ಬಿ., | ಸಹ ಪ್ರಾಧ್ಯಾಪಕರು | ದೈಹಿಕ ಶಿಕ್ಷಣ |
| 03 | ಡಾ. ರಾಜಾನಾಯಕ | ಹಿರಿಯ ಪ್ರಾಧ್ಯಾಪಕರು | ಸಸ್ಯಶಾಸ್ತ್ರ |
| 04 | ಡಾ. ರಾಮಪ್ರಸಾದ್, ಬಿ.ವಿ., | ಪ್ರಾಧ್ಯಾಪಕರು | ಇಂಗ್ಲಿಷ್ |

Scanned with OKEN Scanner

**2023–ಸಿಂ–7.05:** ಡಾ. ಸಿ.ಕೆ. ರಮೇಶ್, ಪ್ರಾಧ್ಯಾಪಕರು – ಇವರನ್ನು ದಾವಣಗೆರೆ ವಿಶ್ವವಿದ್ಯಾಲಯದ ಕುಲಸಚಿವರು (ಮೌಲ್ಯಮಾಪನ) ಹುದ್ದೆಗೆ ನಿಯೋಜಿಸಿರುವ ಕ್ರಮವನ್ನು ಸ್ಥಿರೀಕರಿಸುವ ಕುರಿತು.

**ನಿರ್ಣಯ:** ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ಅಧಿಸೂಚನೆ ಸಂಖ್ಯೆ: ಇಡಿ 158 ಯುಎನ್ಇ 2023, ಬೆಂಗಳೂರು, ದಿನಾಂಕ:10-11-2023ರಲ್ಲಿ ಸಹ್ಯಾದ್ರಿ ವಿಜ್ಞಾನ ಕಾಲೇಜಿನ ಜೈವಿಕತಂತ್ರಜ್ಞಾನ ವಿಭಾಗದ ಪ್ರಾಧ್ಯಾಪಕರಾದ ಡಾ.ಸಿ.ಕೆ. ರಮೇಶ್ ಇವರನ್ನು ದಾವಣಗೆರೆ ವಿಶ್ವವಿದ್ಯಾಲಯದ ಕುಲಸಚಿವ (ಮೌಲ್ಯಮಾಪನ) ಹುದ್ದೆಗೆ ನೇಮಕ ಮಾಡಿದ ಹಿನ್ನೆಲೆಯಲ್ಲಿ, ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ, ಸರ್ಕಾರದ ಅಧಿಸೂಚನೆಯಲ್ಲಿರುವ ಷರತ್ತಿಗೊಳಪಟ್ಟು ನಿಯೋಜಿಸಲು ಅನುಮತಿಸಿದ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.

**2023–ಸಿಂ–7.06:** ವೈದ್ಯಕೀಯ ಚಿಕಿತ್ಸೆಗಾಗಿ ಮುಂಗಡ ಪಾವತಿಸಿರುವ ಆದೇಶಗಳನ್ನು ಸ್ಥಿರೀಕರಿಸುವ ಕುರಿತು.

**ನಿರ್ಣಯ:** ವಿಶ್ವವಿದ್ಯಾಲಯದ ಈ ಕೆಳಕಂಡ ಅಧ್ಯಾಪಕ/ಅಧ್ಯಾಪಕೇತರ ನೌಕರರಿಗೆ/ಅವರ ಕುಟುಂಬದವರಿಗೆ ತುರ್ತು ವೈದ್ಯಕೀಯ ಚಿಕಿತ್ಸೆಗಾಗಿ ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ ಮುಂಗಡ ಪಾವತಿಸಲಾದ ವಿಶ್ವವಿದ್ಯಾಲಯದ ಆದೇಶಗಳನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.

ಎ) ಶ್ರೀಮತಿ ಬೇಬಿ, ಸಿ., ಪ್ರಥಮ ದರ್ಜೆ ಸಹಾಯಕರು – ಇವರ ಮಗನಿಗೆ ಕಸ್ತೂರಬಾ ಆಸ್ಪತ್ರೆ ಮಣಿಪಾಲ್ ಇಲ್ಲಿ ಶಸ್ತ್ರ ಚಿಕಿತ್ಸೆಗಾಗಿ ರೂ.40,000/-

ಬಿ) ಶ್ರೀ ಚಂದ್ರಶೇಖರ್, ಹೆಚ್., ಅಟೆಂಡರ್ ಇವರು ಸಹ್ಯಾದ್ರಿ ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಶಿವಮೊಗ್ಗದಲ್ಲಿ ಶಸ್ತ್ರ ಚಿಕಿತ್ಸೆಗಾಗಿ ರೂ.90,000/-

ಸಿ) ಶ್ರೀ ಷಫಿವುಲ್ಲಾ, ಕೆ., ಸಹಾಯಕ ಪ್ರಾಧ್ಯಾಪಕರು – ಇವರು ಮೆಟ್ರೋ ಯುನೈಟೆಡ್ ಹೆಲ್ತ್‌ಕೇರ್ ಆಸ್ಪತ್ರೆ ಶಿವಮೊಗ್ಗದಲ್ಲಿ ಹೃದಯ ಸಂಬಂಧಿ ಶಸ್ತ್ರಕ್ರಿಯೆಗಾಗಿ ರೂ.95,000/-

**2023–ಸಿಂ–7.07:** ಶ್ರೀಮತಿ ವೇದಾವತಿ ಎಂ.ಎಸ್. ಕಿರಿಯ ಸಹಾಯಕರು ಇವರು ವೈದ್ಯಕೀಯ ಚಿಕಿತ್ಸೆ ಪಡೆದ ಬಾಬ್ತು ಪಾವತಿಸುವ ಕುರಿತು.

**ನಿರ್ಣಯ:** ಶ್ರೀಮತಿ ವೇದಾವತಿ, ಎಂ.ಎಸ್., ಕಿರಿಯ ಸಹಾಯಕರು, ಪರೀಕ್ಷಾ ವಿಭಾಗ ಇವರು ಕಿಡ್ನಿ ಸಂಬಂಧಿತ ಚಿಕಿತ್ಸೆಯನ್ನು ಸರ್ಕಾರದಿಂದ ಅಂಗೀಕೃತ ಮಂಗಳ ಆಸ್ಪತ್ರೆ, ಮಂಗಳೂರು ಇಲ್ಲಿ ಪಡೆದ ಬಾಬ್ತು ವಿಶ್ವವಿದ್ಯಾಲಯದ ವೈದ್ಯಾಧಿಕಾರಿಗಳು ಅಂಗೀಕರಿಸಿರುವ ಮೊತ್ತ ರೂ.1,60,190/- (ಒಂದು ಲಕ್ಷ ಅರವತ್ತು ಸಾವಿರದ ಒಂದುನೂರಾ ತೊಂಭತ್ತು ರೂಪಾಯಿಗಳು ಮಾತ್ರ)ಗಳನ್ನು ಪಾವತಿಸಲು ಸಭೆಯು ಅನುಮೋದನೆ ನೀಡಿತು.

**2023–ಸಿಂ–7.07(ಎ):** ವಿಶ್ವವಿದ್ಯಾಲಯದ ಅಧ್ಯಾಪಕರುಗಳಿಗೆ ನಿವೃತ್ತಿ ವೇತನ ವಂತಿಗೆ/ರಜಾ ವೇತನ ವಂತಿಗೆ ಪಾವತಿಸುವ ಕುರಿತು.

**ಚರ್ಚೆ:** ಮಾನ್ಯ ಕುಲಪತಿಯವರು ಮಾತನಾಡುತ್ತಾ, ವಿಶ್ವವಿದ್ಯಾಲಯದಲ್ಲಿ ವಿವಿಧ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧ್ಯಾಪಕ ನೌಕರರು ವಿಶ್ವವಿದ್ಯಾಲಯದ ಸೇವೆಗೆ ದಿನಾಂಕ:01-04-2006ರ ನಂತರದಲ್ಲಿ ನೇಮಕಗೊಳ್ಳುವ ಮುಂಚೆ ಬೇರೆ ವಿಶ್ವವಿದ್ಯಾಲಯಗಳು, ಕಾಲೇಜು, ಸರ್ಕಾರದ ಇಲಾಖೆಗಳಲ್ಲಿ ಮತ್ತು ಸರ್ಕಾರದ ವೇತನಾನುದಾನಿತ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ವಿಶ್ವವಿದ್ಯಾಲಯ/ಇಲಾಖೆಗಳಲ್ಲಿ ಸೂಕ್ತ ನೇಮಕಾತಿ ಪ್ರಾಧಿಕಾರಗಳ ಮೂಲಕ ಸಮುಚಿತ ಮಾರ್ಗದಲ್ಲಿ ಅರ್ಜಿ ಸಲ್ಲಿಸಿದ್ದು, ಕುವೆಂಪು ವಿಶ್ವವಿದ್ಯಾಲಯದಲ್ಲಿ ನೇಮಕಗೊಂಡ ನಂತರ ಮೂಲ ವಿಶ್ವವಿದ್ಯಾಲಯ/ಸಂಸ್ಥೆ/ಇಲಾಖೆಗಳ ಸೇವೆಯಿಂದ ಬಿಡುಗಡೆಗೊಂಡು ಬಂದು ಕುವೆಂಪು ವಿಶ್ವವಿದ್ಯಾಲಯದಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತಾರೆ. ಸರ್ಕಾರದ ಆದೇಶ ಸಂಖ್ಯೆ: FD (SPL) 01 PEN-2007 Bangalore, dated:12-07-2007 ಹಾಗೂ ಎಫ್‌ಡಿ 01 ಎಸ್‌ಆರ್‌ಎ 2011 ಬೆಂಗಳೂರು, ದಿನಾಕ:05-03-2011 ಗಳನ್ವಯ ಇಂತಹ ಉದ್ಯೋಗಿಗಳು ಹಳೆಯ ಪಿಂಚಣಿ ಯೋಜನೆಯಲ್ಲಿ ಮುಂದುವರೆಯುತ್ತಾರೆ. ಇಂತಹ ನೌಕರರಿಗೆ ಹಿಂದಿನ ಸೇವೆಯ ಪಿಂಚಣಿ

ವಂತಿಗೆ/ರಜಾ ವೇತನ ವಂತಿಗೆಯನ್ನು ಸಂಬಂಧಪಟ್ಟ ವಿಶ್ವವಿದ್ಯಾಲಯ/ಸಂಸ್ಥೆ/ಇಲಾಖೆಗಳು ಕುವೆಂಪು ವಿಶ್ವವಿದ್ಯಾಲಯಕ್ಕೆ ಪಾವತಿಸಬೇಕಾಗುತ್ತದೆ. ಇದರಲ್ಲಿ ಕೆಲವು ವಿಶ್ವವಿದ್ಯಾಲಯ/ಸಂಸ್ಥೆಗಳು ಪಿಂಚಣಿ ವಂತಿಕೆಯನ್ನು ಪಾವತಿಸುತ್ತಿವೆ. ಆದರೆ, ಇನ್ನುಳಿದ ಕೆಲವು ವಿಶ್ವವಿದ್ಯಾಲಯ/ಸಂಸ್ಥೆಗಳಿಗೆ ಪಿಂಚಣಿ ವಂತಿಕೆ ಪಾವತಿಸುವಂತೆ ಹಲವು ಪತ್ರಗಳನ್ನು ಬರೆದಿದ್ದರೂ ಕೂಡ ಪಾವತಿಸುತ್ತಿಲ್ಲ. ಇದರಿಂದಾಗಿ ನೌಕರರು ನಿವೃತ್ತರಾದ ಸಂದರ್ಭದಲ್ಲಿ ಪಿಂಚಣಿ ಇತ್ಯರ್ಥಪಡಿಸಲು ಸಾಧ್ಯವಾಗುತ್ತಿಲ್ಲ. ಆದುದರಿಂದ ಮೂಲ ಸಂಸ್ಥೆ/ಇಲಾಖೆಗಳು ಪಿಂಚಣಿ ವಂತಿಕೆ ಪಾವತಿಸದ ಸಂದರ್ಭದಲ್ಲಿ Mysore University Pension Statutes 1979ರ ಪ್ರಕಾರ ಸಂಬಂಧಿಸಿದ ನೌಕರರಿಂದ ಹಿಂದಿನ ಸೇವೆಯ ಪಿಂಚಣಿ ವಂತಿಗೆ/ರಜಾ ವೇತನ ವಂತಿಗೆಯನ್ನು ಪಾವತಿಸಿಕೊಳ್ಳಲು ಅವಕಾಶವಿದ್ದು, ಇದನ್ನು ಕುವೆಂಪು ವಿಶ್ವವಿದ್ಯಾಲಯದ ನೌಕರರಿಗೆ ಕೂಡ ವಿಸ್ತರಿಸಲು ಅವಕಾಶ ನೀಡುವ ಸಲುವಾಗಿ ಸಭೆಯ ಅನುಮೋದನೆಗೆ ಮಂಡಿಸಿದೆ ಎಂದರು.

**ನಿರ್ಣಯ:** ಚರ್ಚೆಯ ನಂತರ, ಬೇರೆ ವಿಶ್ವವಿದ್ಯಾಲಯ, ಸಂಸ್ಥೆ, ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದ ಅಧ್ಯಾಪಕ/ಅಧ್ಯಾಪಕೇತರ ನೌಕರರು ಸಮುಚಿತ ಮಾರ್ಗದಲ್ಲಿ ಅರ್ಜಿ ಸಲ್ಲಿಸಿ ಕುವೆಂಪು ವಿಶ್ವವಿದ್ಯಾಲಯದಲ್ಲಿ ದಿನಾಂಕ:01–04–2006ರ ನಂತರದಲ್ಲಿ ನೇಮಕಗೊಂಡು ಹಳೆಯ ಪಿಂಚಣಿ ಯೋಜನೆಯಲ್ಲಿ ಮುಂದುವರೆದಿರುವ ಪ್ರಕರಣಗಳಲ್ಲಿ ಅಂತಹ ಅಧ್ಯಾಪಕರು/ಅಧ್ಯಾಪಕೇತರ ನೌಕರರು ವಯೋನಿವೃತ್ತಿ ಹೊಂದಿದಾಗ ಅವರ ಮೂಲ ವಿಶ್ವವಿದ್ಯಾಲಯ/ಸಂಸ್ಥೆ/ಇಲಾಖೆಯಿಂದ ಪಿಂಚಣಿ ವಂತಿಕೆ ಪಾವತಿಸದ ಸಂದರ್ಭದಲ್ಲಿ ಸಂಬಂಧಪಟ್ಟ ನೌಕರರೇ ಪಿಂಚಣಿ ವಂತಿಗೆ/ರಜಾ ವೇತನ ವಂತಿಗೆಯನ್ನು ಕುವೆಂಪು ವಿಶ್ವವಿದ್ಯಾಲಯಕ್ಕೆ ಪಾವತಿಸಿ ನಿವೃತ್ತಿ ಸೌಲಭ್ಯ ಪಡೆಯಲು ಸಭೆಯು ಅನುಮತಿಸಿತು.

## ಶೈಕ್ಷಣಿಕ ವಿಭಾಗ

**2023–ಶಿಂ–7.08:** ಸರ್.ಎಂ.ವಿ. ಸರ್ಕಾರಿ ವಿಜ್ಞಾನ ಕಾಲೇಜು, ಬೊಮ್ಮನಕಟ್ಟೆ – ಈ ಸಂಸ್ಥೆಯ, "ಸ್ನಾತಕೋತ್ತರ ಔದ್ಯೋಗಿಕ ರಸಾಯನಶಾಸ್ತ್ರ" ವಿಭಾಗದ "ಸಂಶೋಧನಾ ಕೇಂದ್ರ"ದ ಮಾನ್ಯತೆ ನವೀಕರಿಸುವ ಕುರಿತು.

**ಚರ್ಚೆ:** ಕುಲಸಚಿವರು ವಿಷಯ ಮಂಡಿಸಿ ಮಾತನಾಡುತ್ತಾ, ವಿಶ್ವವಿದ್ಯಾಲಯದ ಪಿಹೆಚ್.ಡಿ., ಪರಿನಿಯಮದ ಪ್ರಕರಣ–10ರ ಪ್ರಕಾರ ಭದ್ರಾವತಿಯ ಸರ್.ಎಂ.ವಿ. ಸರ್ಕಾರಿ ವಿಜ್ಞಾನ ಕಾಲೇಜಿನ ಸ್ನಾತಕೋತ್ತರ ಔದ್ಯೋಗಿಕ ರಸಾಯನಶಾಸ್ತ್ರ ವಿಭಾಗದ ಸಂಶೋಧನಾ ಕೇಂದ್ರದ ಮಾನ್ಯತೆಯನ್ನು ಮೂರು ವರ್ಷಗಳ ಅವಧಿಗೆ ನವೀಕರಿಸುವ ಸಲುವಾಗಿ ಕಾಲೇಜಿಗೆ ಭೇಟಿ ನೀಡಿ ವರದಿ ಸಲ್ಲಿಸಲು ಒಂದು ಸಮಿತಿಯನ್ನು ರಚಿಸುವುದಕ್ಕಾಗಿ ಸಲ್ಲಿಸಿರುವ ಪಟ್ಟಿಯಿಂದ ಇಬ್ಬರು ಬಾಹ್ಯ ತಜ್ಞರನ್ನು ನಾಮನಿರ್ದೇಶನ ಮಾಡಲು ಸಭೆಗೆ ಮಂಡಿಸಿದೆ ಎಂದರು. ಡಾ.ವಿಷ್ಣುಮೂರ್ತಿ, ಕೆ.ಎ., ರವರು ಮಾತನಾಡುತ್ತಾ, ಸದರಿ ಕಾಲೇಜಿನಲ್ಲಿದ್ದ ಎಲ್ಲಾ ಮಾರ್ಗದರ್ಶಕರು ಬೇರೆ ಕಾಲೇಜುಗಳಿಗೆ ವರ್ಗಾವಣೆಗೊಂಡಿದ್ದಾರೆ ಎಂದರು. ಕುಲಸಚಿವರು ಮಾತನಾಡಿ, ಸದರಿ ಮಾರ್ಗದರ್ಶಕರ ಅಡಿಯಲ್ಲಿ ಈಗಾಗಲೇ ನೋಂದಣಿ ಆಗಿರುವ ಸಂಶೋಧನಾರ್ಥಿಗಳು ಪಿಹೆಚ್.ಡಿ., ಪೂರ್ಣಗೊಳಿಸುವವರೆಗೆ ಸಂಶೋಧನಾ ಕೇಂದ್ರವನ್ನು ಮುಂದುವರೆಸುವುದು ಅಗತ್ಯವಿದೆ ಎಂದರು.

**ನಿರ್ಣಯ:** ಚರ್ಚೆಯ ನಂತರ ಭದ್ರಾವತಿಯ ಸರ್.ಎಂ.ವಿ., ಸರ್ಕಾರಿ ವಿಜ್ಞಾನ ಕಾಲೇಜಿನ ಸ್ನಾತಕೋತ್ತರ ಔದ್ಯೋಗಿಕ ರಸಾಯನಶಾಸ್ತ್ರ ವಿಭಾಗದ ಸಂಶೋಧನಾ ಕೇಂದ್ರದ ಮಾನ್ಯತೆಯನ್ನು ನವೀಕರಿಸುವ ಸಲುವಾಗಿ ಸಲ್ಲಿಸಿರುವ ತಜ್ಞರ ಪಟ್ಟಿಯಿಂದ ಪ್ರೊ.ಕೆ.ಎಸ್.ಆರ್.ಪೈ, ಮಾಹೆ, ಮಣಿಪಾಲ್ ಹಾಗೂ ಪ್ರೊ.ಸರೋಜಿನಿ, ಮಂಗಳೂರು ವಿಶ್ವವಿದ್ಯಾಲಯ ಇವರುಗಳನ್ನು ಸಭೆಯಲ್ಲಿ ನಾಮನಿರ್ದೇಶನ ಮಾಡಲಾಯಿತು.

**2023–ಶಿಂ–7.09:** ಸಹ್ಯಾದ್ರಿ ಕಲಾ ಕಾಲೇಜು, ಶಿವಮೊಗ್ಗ – ಈ ಕಾಲೇಜಿನ "ಸ್ನಾತಕೋತ್ತರ ಇಂಗ್ಲೀಷ್", "ಸ್ನಾತಕೋತ್ತರ ರಾಜ್ಯಶಾಸ್ತ್ರ" ಮತ್ತು "ಸ್ನಾತಕೋತ್ತರ ಅರ್ಥಶಾಸ್ತ್ರ" ವಿಭಾಗಗಳ "ಸಂಶೋಧನಾ ಕೇಂದ್ರ"ದ ಮಾನ್ಯತೆಯನ್ನು ನವೀಕರಿಸುವ ಕುರಿತು.

Scanned with OKEN Scanner

**ನಿರ್ಣಯ:** ವಿಶ್ವವಿದ್ಯಾಲಯದ ಘಟಕ ಕಾಲೇಜಾದ ಸಹ್ಯಾದ್ರಿ ಕಲಾ ಕಾಲೇಜು, ಶಿವಮೊಗ್ಗ ಇಲ್ಲಿನ "ಸ್ನಾತಕೋತ್ತರ ಇಂಗ್ಲಿಷ್", "ಸ್ನಾತಕೋತ್ತರ ರಾಜ್ಯಶಾಸ್ತ್ರ" ಮತ್ತು "ಸ್ನಾತಕೋತ್ತರ ಅರ್ಥಶಾಸ್ತ್ರ" ವಿಭಾಗಗಳ "ಸಂಶೋಧನಾ ಕೇಂದ್ರ"ದ ಮಾನ್ಯತೆಯನ್ನು ನವೀಕರಿಸುವ ಸಲುವಾಗಿ ರಚಿಸುವ ಸಮಿತಿಗೆ ಈ ಕೆಳಕಂಡ ಬಾಹ್ಯ ಪರಿಣಿತರನ್ನು ನಾಮನಿರ್ದೇಶನ ಮಾಡಲಾಯಿತು.

**ಎ) ಇಂಗ್ಲಿಷ್ ಸಂಶೋಧನಾ ಕೇಂದ್ರ**

1. ಪ್ರೊ.ಸುಜಾತ, ಸಿ.ಇ., ಮೈಸೂರು ವಿವಿ ಸ್ನಾತಕೋತ್ತರ ಕೇಂದ್ರ, ಹಾಸನ
2. ಪ್ರೊ.ಶಿವಲಿಂಗಸ್ವಾಮಿ, ತುಮಕೂರು ವಿಶ್ವವಿದ್ಯಾಲಯ

**ಬಿ) ರಾಜ್ಯಶಾಸ್ತ್ರ ಸಂಶೋಧನಾ ಕೇಂದ್ರ**

1. ಪ್ರೊ. ಸುರೇಂದ್ರಕುಮಾರ್, ಎ., ಬೆಂಗಳೂರು ವಿಶ್ವವಿದ್ಯಾಲಯ
2. ಪ್ರೊ.ಶಂಕರನರಣಪ್ಪ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮೈಸೂರು

**ಸಿ) ಅರ್ಥಶಾಸ್ತ್ರ ಸಂಶೋಧನಾ ಕೇಂದ್ರ**

1) ಪ್ರೊ. ವಿಶ್ವನಾಥ, ಮಂಗಳೂರು ವಿಶ್ವವಿದ್ಯಾಲಯ
2) ಪ್ರೊ.ಆರ್.ಆರ್. ಬಿರಾದಾರ್, ಕರ್ನಾಟಕ ವಿಶ್ವವಿದ್ಯಾಲಯ

**2023–ಸಿಂ–7.10:** Late Prof. Vidwan V.N. Bhat Memorial Gold Medal ಹೆಸರಿನಲ್ಲಿ ಸ್ವರ್ಣಪದಕ ಸ್ಥಾಪನೆ ಬಗ್ಗೆ.

**ನಿರ್ಣಯ:** ದಾನಿಗಳಾದ ಶ್ರೀಮತಿ ನಿರ್ಮಲ ವಿ.ಎನ್.ಭಟ್ ಬಿನ್ ದಿ.ಪ್ರೊ.ವಿಧ್ವಾನ್ ವಿ.ಎನ್.ಭಟ್, ಜ್ಞಾನದೀಪ, 3ನೇ ತಿರುವು, ಸಹ್ಯಾದ್ರಿ ನಗರ, ವಿನೋಬನಗರ ಬಡಾವಣೆ, ಶಿವಮೊಗ್ಗ ಇವರು ಕುವೆಂಪು ವಿಶ್ವವಿದ್ಯಾಲಯದ ಕಲಾ ನಿಕಾಯದ ಸ್ನಾತಕೋತ್ತರ ಸಂಸ್ಕೃತ (ಎಂ.ಎ. ಸಂಸ್ಕೃತ) ಅಧ್ಯಯನ ವಿಭಾಗದಲ್ಲಿ ಪ್ರಥಮ ಮತ್ತು ದ್ವಿತೀಯ ವರ್ಷದ ದರ್ಶನಶಾಸ್ತ್ರ ಸ್ಪೆಷಲ್ (ಸಾಫ್ಟ್ ಕೋರ್) ಪೇಪರ್‌ನಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗೆ "Late Prof. Vidwan V.N. Bhat Memorial Gold Medal" ಹೆಸರಿನಲ್ಲಿ ಸ್ವರ್ಣ ಪದಕ ನೀಡುವ ಸಲುವಾಗಿ ದತ್ತಿನಿಧಿ ಸ್ವರ್ಣಪದಕ ಸ್ಥಾಪಿಸಲು ಸಭೆಯು ಅನುಮೋದನೆ ನೀಡಿತು.

**2023–ಸಿಂ–7.11:** ಸ್ನಾತಕ ಹಾಗೂ ಸ್ನಾತಕೋತ್ತರ ಕೋರ್ಸ್‌ಗಳಿಗೆ ಸಂಬಂಧಿಸಿದಂತೆ ಏಕರೂಪ ಶುಲ್ಕ ನಿಗದಿಪಡಿಸುವ ಕುರಿತು.

**ಚರ್ಚೆ:** ಕುಲಸಚಿವರು ವಿಷಯ ಮಂಡಿಸಿ ಮಾತನಾಡುತ್ತಾ, ಈ ಹಿಂದೆ ರಾಜ್ಯದ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಶುಲ್ಕ ಮತ್ತು ಸಂಭಾವನೆಯ ದರಗಳು ಬೇರೆ ಬೇರೆಯಾಗಿದ್ದವು. ಈ ಹಿನ್ನಲೆಯಲ್ಲಿ ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಗೊಳಪಡುವ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳಿಗೆ ಏಕರೂಪದ ಶುಲ್ಕ, ಏಕರೂಪದ ಪರೀಕ್ಷಾ ಸಂಭಾವನೆ ಹಾಗೂ ಪರೀಕ್ಷಾ ವ್ಯವಸ್ಥೆಯನ್ನು ಸುವ್ಯವಸ್ಥಿತಗೊಳಿಸಲು ಸರ್ಕಾರಕ್ಕೆ ವರದಿ ನೀಡಲು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಉಪಾಧ್ಯಕ್ಷರ ಅಧ್ಯಕ್ಷತೆಯಲ್ಲಿ ಆಯ್ದ ಕೆಲವು ವಿಶ್ವವಿದ್ಯಾಲಯಗಳ ಕುಲಪತಿಗಳು ಹಾಗೂ ಕುಲಸಚಿವರು ಮತ್ತು ಇತರೆ ಶಿಕ್ಷಣ ತಜ್ಞರನ್ನು ಒಳಗೊಂಡ ಸಮಿತಿಯನ್ನು ಸರ್ಕಾರವು ರಚಿಸಿತ್ತು. ಸದರಿ ಸಮಿತಿಯು ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿನ ಶುಲ್ಕ ಮತ್ತು ಸಂಭಾವನೆ ದರಗಳ ಮಾಹಿತಿಗಳನ್ನು ಪಡೆದುಕೊಂಡು, ಅವುಗಳನ್ನು ಸಮಗ್ರವಾಗಿ ಪರಿಶೀಲಿಸಿ ಏಕರೂಪದ ಶುಲ್ಕ ಮತ್ತು ಸಂಭಾವನೆಯನ್ನು ಜಾರಿಗೊಳಿಸುವ ಕುರಿತಾಗಿ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿದ್ದು, ಸದರಿ ಸಮಿತಿಯು ನೀಡಿರುವ ವರದಿಯ ಶಿಫಾರಸ್ಸುಗಳಿಗೆ ಸರ್ಕಾರವು ಸಹಮತಿಸಿ ಒಪ್ಪಿಗೆ ನೀಡಿದ್ದು, ಸಮಿತಿಯು ಶಿಫಾರಸ್ಸು ಮಾಡಿರುವ ವಿವಿಧ ಶುಲ್ಕಗಳನ್ನು ನಿಯಮಾನುಸಾರ ವಿಶ್ವವಿದ್ಯಾಲಯದಲ್ಲಿ ಅಳವಡಿಸಿಕೊಂಡು ಕೈಗೊಂಡ ಕ್ರಮದ ಬಗ್ಗೆ ಸರ್ಕಾರಕ್ಕೆ ವರದಿ ನೀಡುವಂತೆ ತಿಳಿಸಿರುತ್ತಾರೆ. ಇದನ್ನು ಸಭೆಯ ಅನುಮೋದನೆಗಾಗಿ ಮಂಡಿಸಿದೆ ಎಂದರು.



Scanned with OKEN Scanner

ಸದಸ್ಯರಾದ ಡಾ.ಸಂಧ್ಯಾ ಕಾವೇರಿರವರು ಮಾತನಾಡಿ, ಬೆಂಗಳೂರು, ಮಂಗಳೂರು ಸೇರಿದಂತೆ ಕೆಲವು ವಿಶ್ವವಿದ್ಯಾಲಯಗಳ ಶುಲ್ಕಗಳು ಜಾಸ್ತಿ ಇದ್ದು, ಬೇರೆ ವಿಶ್ವವಿದ್ಯಾಲಯಗಳ ಶುಲ್ಕಗಳನ್ನು ಅಳವಡಿಸಿಕೊಂಡಲ್ಲಿ ನಮ್ಮ ವಿದ್ಯಾರ್ಥಿಗಳಿಗೆ ಆರ್ಥಿಕ ಹೊರೆಯಾಗುತ್ತದೆ ಎಂದರು. ಕುಲಸಚಿವರು ಮಾಹಿತಿ ನೀಡುತ್ತಾ, ಏಕರೂಪದ ಶುಲ್ಕ ನಿಗದಿಪಡಿಸುವಾಗ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳ ಶುಲ್ಕಗಳ ಮಾಹಿತಿ ಪಡೆದುಕೊಂಡು ಅತೀ ಕಡಿಮೆ ಶುಲ್ಕ ಇರುವ ವಿಶ್ವವಿದ್ಯಾಲಯಗಳನ್ನು ಆಧಾರವಾಗಿ ಇಟ್ಟುಕೊಳ್ಳಲಾಗಿದೆ. ಇದರಿಂದಾಗಿ, ಅತೀ ಹೆಚ್ಚು ಶುಲ್ಕ ಇರುವ ವಿಶ್ವವಿದ್ಯಾಲಯವನ್ನು ಅನುಸರಿಸಿಲ್ಲ ಎಂದರು. ಸದಸ್ಯರಾದ ಶ್ರೀ ಬಿ.ಎನ್.ಶಶಿಧರರವರು ಮಾತನಾಡಿ, 2023–24ನೇ ಶೈಕ್ಷಣಿಕ ಸಾಲಿನ ಪ್ರವೇಶಗಳು ಮುಗಿದಿದ್ದು, ಏಕರೂಪ ಶುಲ್ಕಗಳು ಎಂದಿನಿಂದ ಅನ್ವಯವಾಗುತ್ತವೆ? ಎಂದರು. ಕುಲಸಚಿವರು ಮಾಹಿತಿ ನೀಡುತ್ತಾ, ಪ್ರಸ್ತುತ ಪ್ರವೇಶ ಮುಗಿದಿರುವುದರಿಂದ ಪ್ರವೇಶ ಶುಲ್ಕವನ್ನು ಮಾತ್ರ ಹೊರತುಪಡಿಸಿ ಉಳಿದ ಶುಲ್ಕಗಳನ್ನು 2023–24ನೇ ಸಾಲಿನಿಂದ ಅಳವಡಿಸಿಕೊಳ್ಳಬಹುದು ಎಂದರು.

**ನಿರ್ಣಯ:** ಸುದೀರ್ಘ ಚರ್ಚೆಯ ನಂತರ, ಕರ್ನಾಟಕ ಸರ್ಕಾರದ ಏಕರೂಪ ಶುಲ್ಕ ಮತ್ತು ಸಂಭಾವನೆ ದರಗಳನ್ನು ಕುವೆಂಪು ವಿಶ್ವವಿದ್ಯಾಲಯದಲ್ಲಿ ಯಥಾವತ್ತಾಗಿ ಅಳವಡಿಸಿಕೊಳ್ಳಲು ಅನುಮೋದಿಸಿದ ಸಭೆಯು, ಈಗಾಗಲೇ 2023–24ನೇ ಸಾಲಿನ ಪ್ರವೇಶ ಪ್ರಕ್ರಿಯೆ ಮುಗಿದಿರುವುದರಿಂದ ಸ್ನಾತಕ ಮತ್ತು ಸ್ನಾತಕೋತ್ತರ ಪ್ರವೇಶ ಶುಲ್ಕಗಳನ್ನು 2024–25ನೇ ಶೈಕ್ಷಣಿಕ ವರ್ಷದಿಂದ ಅಳವಡಿಸಿಕೊಳ್ಳಲು ಮತ್ತು ಉಳಿದ ಎಲ್ಲಾ ಶುಲ್ಕ ಮತ್ತು ಸಂಭಾವನೆ ದರಗಳನ್ನು 2023–24ನೇ ಶೈಕ್ಷಣಿಕ ಸಾಲಿನಿಂದಲೇ ಅಳವಡಿಸಿಕೊಳ್ಳಲು ನಿರ್ಣಯಿಸಲಾಯಿತು.

**023–ಸಿಂ–7.12:** ಪಿಹೆಚ್.ಡಿ. ವಿಷಯವನ್ನು Applied Geology ಬದಲು Geoinformatics ಎಂದು ಬದಲಾಯಿಸುವ ಬಗ್ಗೆ.

**ಚರ್ಚೆ:** ಕುಲಸಚಿವರು ಮಾತನಾಡುತ್ತಾ, ವಿಶ್ವವಿದ್ಯಾಲಯದ ಅನ್ವಯಿಕ ಭೂವಿಜ್ಞಾನ ಅಧ್ಯಯನ ವಿಭಾಗದಲ್ಲಿ Earth Science and Resource Management (ESRM) & Geoinformatics ಎಂಬ ಎರಡು ವಿಷಯಗಳಿದ್ದು, ಪಿಹೆಚ್.ಡಿ. ಸಂಶೋಧನಾ ವಿದ್ಯಾರ್ಥಿಗಳು ಎರಡು ವಿಷಯಗಳಿಗೆ ಪ್ರವೇಶಾತಿ ಪಡೆದು ಅಧ್ಯಯನ ನಡೆಸುತ್ತಿದ್ದಾರೆ. ಪಿಹೆಚ್.ಡಿ. ಸಂಶೋಧನಾರ್ಥಿಗಳಿಗೆ ನೀಡಲಾಗುತ್ತಿರುವ ಅಧಿಸೂಚನೆಗಳಲ್ಲಿ ವಿಷಯವನ್ನು 'ಅನ್ವಯಿಕ ಭೂವಿಜ್ಞಾನ' ಎಂದು ನಮೂದಿಸಲಾಗುತ್ತಿದೆ. ಆದರೆ ಇದರಿಂದ ವಿದ್ಯಾರ್ಥಿಗಳಿಗೆ ಕೋರ್ಸ್‌ನ ಪದನಾಮದಲ್ಲಿ ತೊಂದರೆಯಾಗುತ್ತಿರುವುದರಿಂದ ಇದನ್ನು Geoinformaticsನಲ್ಲಿ ಅಧ್ಯಯನ ನಡೆಸುತ್ತಿರುವ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿರುವ ಅಧಿಸೂಚನೆಯಲ್ಲಿ 'ಅನ್ವಯಿಕ ಭೂವಿಜ್ಞಾನ'ದ ಬದಲು Geoinformatics ಎಂದು ಬದಲಾಯಿಸುವಂತೆ ವಿಭಾಗಾಧ್ಯಕ್ಷರು ಕೋರಿರುತ್ತಾರೆ. ಆದರೆ, ಸದರಿ ವಿಷಯಕ್ಕೆ ಕುಲಾಧಿಪತಿಯವರಿಂದ ಅನುಮೋದಿತ ಪರಿನಿಯಮ ಇಲ್ಲದಿದ್ದರೂ ವಿಶ್ವವಿದ್ಯಾಲಯವು ಅನ್ವಯಿಕ ಭೂವಿಜ್ಞಾನದ Geoinformatics ವಿಷಯವನ್ನು ಸೇರಿಸಿಕೊಂಡು ಪ್ರತ್ಯೇಕವಾದ ಅಧ್ಯಯನ ಮಂಡಳಿ ಹಾಗೂ ಡಾಕ್ಟರಲ್ ಕಮಿಟಿ ರಚಿಸಿರುತ್ತದೆ. ಆದ್ದರಿಂದ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ, ಪ್ರಸ್ತುತ ಪಿಹೆಚ್.ಡಿ.ಯ Geoinformatics ವಿಷಯವನ್ನು 'Geoinformatics (Applied Geology)' ಎಂದು ಬದಲಾಯಿಸಬಹುದಾಗಿದ್ದು, ಸಭೆಯ ಅನುಮೋದನೆಗೆ ಮಂಡಿಸಿದೆ ಎಂದರು. ಸದಸ್ಯರಾದ ಶ್ರೀ ಬಿ.ಎನ್.ಶಶಿಧರ್‌ರವರು ಮಾತನಾಡಿ ಈ ಬಗ್ಗೆ ಅಧ್ಯಯನ ಮಂಡಳಿ ಇತ್ಯಾದಿಗಳಲ್ಲಿ ಅನುಮೋದನೆ ಆಗಬೇಕಾಗುತ್ತದೆ ಎಂದರು. ಸಭೆಗೆ ವಿಶೇಷ ಆಹ್ವಾನಿತರಾಗಿ ಆಗಮಿಸಿದ್ದ ಯು.ಯು.ಸಿ.ಎಂ.ಎಸ್./ ಎನ್.ಇ.ಪಿ. ನೋಡಲ್ ಆಫೀಸರ್ ಆದ ಪ್ರೊ.ಸೈಯದ್ ಅಶ್ಫಕ್ ಅಹ್ಮದ್ ರವರು ಮಾತನಾಡಿ, ಇದು ಅಧ್ಯಯನ ಮಂಡಳಿ, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ ಹಾಗೂ ದಿನಾಂಕ:22–11–2023ರಂದು ನಡೆದ ವಿದ್ಯಾವಿಷಯಕ ಪರಿಷತ್ತಿನಲ್ಲಿ ಕೂಡ ಅನುಮೋದನೆಯಾಗಿದೆ. ಭೂವಿಜ್ಞಾನ ವಿಭಾಗದಲ್ಲಿರುವ Earth Science and Resource Management (ESRM) & Geoinformatics ಎರಡೂ ವಿಷಯಗಳಿಗೆ ಪ್ರತ್ಯೇಕವಾದ ಅಧ್ಯಯನ ಮಂಡಳಿ, ಪರೀಕ್ಷಾ ಮಂಡಳಿ, ಡಾಕ್ಟರಲ್ ಸಮಿತಿಗಳಿವೆ. ಪದನಾಮ ಬದಲಾವಣೆ ಮಾಡುವುದರಿಂದ ಪಿಹೆಚ್.ಡಿ. ಸಂಶೋಧನಾರ್ಥಿಗಳಿಗೆ ಅನುಕೂಲವಾಗುತ್ತದೆ ಎಂದರು.



Scanned with OKEN Scanner

ನಿರ್ಣಯ: ಸುಧೀರ್ಘ ಚರ್ಚೆಯ ನಂತರ ಸಂಶೋಧನಾರ್ಥಿಗಳ ಹಿತದೃಷ್ಟಿಯಿಂದ ಪ್ರಸ್ತುತ ಪಿಹೆಚ್.ಡಿ.ಯ Geoinformatics ವಿಷಯವನ್ನು Geoinformatics (Applied Geology) ಎಂದು ಬದಲಾಯಿಸಲು ಸಭೆಯು ಅನುಮೋದಿಸಿತು.

## ಪರೀಕ್ಷಾ ವಿಭಾಗ

**2023–ಸಿಂ–7.13:** ದಿನಗೂಲಿ ಆಧಾರದ ಮೇಲೆ 'ಡಾಟಾ ಎಂಟ್ರಿ ಅಪರೇಟರ್' ಗಳನ್ನು ಯು.ಯು.ಸಿ.ಎಂ.ಎಸ್. ನೇಮಿಸಿಕೊಂಡಿರುವ ಕುರಿತು.

ನಿರ್ಣಯ: ಸರ್ಕಾರದ ಆದೇಶದ ಪ್ರಕಾರ ವಿದ್ಯಾರ್ಥಿಗಳ ದತ್ತಾಂಶ ಹಾಗೂ ಪರೀಕ್ಷಾ ಫಲಿತಾಂಶವನ್ನು ಯು.ಯು.ಸಿ.ಎಂ.ಎಸ್. ತಂತಾಂಶದಲ್ಲಿ ಅಳವಡಿಸಲು ಅಗತ್ಯವಿರುವ ದಿನಗೂಲಿ ನೌಕರರಿಗೆ ಕರ್ನಾಟಕ ಸರ್ಕಾರದ ಕಾರ್ಮಿಕ ಇಲಾಖೆಯ ಕನಿಷ್ಠ ವೇತನ+ವಿ.ಡಿ.ಎ., ಸೇರಿದಂತೆ ವೇತನ ನಿಗದಿಪಡಿಸಿ ಪಾವತಿಸಲು ಸಭೆಯು ಅನುಮೋದನೆ ನೀಡಿತು.

**2023–ಸಿಂ–7.14:** ದಿನಾಂಕ:10–08–2023 ಹಾಗೂ ದಿನಾಂಕ:11–08–2023 ರಂದು ನಡೆದ ವಿದ್ಯಾರ್ಥಿಗಳ ಪರೀಕ್ಷಾ ಅಕ್ರಮ ವಿಚಾರಣಾ ಸಮಿತಿ ಸಭೆಯ ನಡಾವಳಿಗಳನ್ನು ಸ್ಥಿರೀಕರಣಕ್ಕಾಗಿ ಮಂಡಿಸುವ ಕುರಿತು.

ಚರ್ಚೆ: ಕುಲಸಚಿವ (ಮೌಲ್ಯಮಾಪನ)ರವರು ಮಾತನಾಡಿ, ಮಾರ್ಚ್/ಏಪ್ರಿಲ್–2023ರಲ್ಲಿ ನಡೆದ ಪದವಿ ಪರೀಕ್ಷೆಗಳಲ್ಲಿ ಅಕ್ರಮವೆಸಗಿದ ವಿದ್ಯಾರ್ಥಿಗಳಿಗೆ ನಿವೃತ್ತ ಜಿಲ್ಲಾ ನ್ಯಾಯಾಧೀಶರ ನೇತೃತ್ವದ ಪರೀಕ್ಷಾ ಅಕ್ರಮ ವಿಚಾರಣಾ ಸಮಿತಿಯು ದಿನಾಂಕ:10–08–2023 ಹಾಗೂ ದಿನಾಂಕ:11–08–2023 ರಂದು ವಿಚಾರಣೆ ನಡೆಸಿ, ದಂಡನೆ ವಿಧಿಸಿದೆ. ಸದರಿ ವಿದ್ಯಾರ್ಥಿಗಳು ಮುಂಬರುವ ಪರೀಕ್ಷೆ ತೆಗೆದುಕೊಳ್ಳಲು ಅನುವಾಗುವಂತೆ ಸಿಂಡಿಕೇಟ್ ಸಭೆಯ ಅನುಮೋದನೆ ಕಾಯ್ದಿರಿಸಿ ನಿರ್ಣಯಪತ್ರಗಳನ್ನು ಈಗಾಗಲೇ ಕಳುಹಿಸಲಾಗಿದೆ. ಆದುದರಿಂದ, ಪರೀಕ್ಷಾ ಅಕ್ರಮ ವಿಚಾರಣಾ ಸಮಿತಿ ಸಭೆಯ ನಡಾವಳಿಗಳನ್ನು ಸ್ಥಿರೀಕರಣಕ್ಕಾಗಿ ಸಭೆಗೆ ಮಂಡಿಸಿದೆ ಎಂದರು.

ಸದಸ್ಯರಾದ ಡಾ.ಸಂಧ್ಯಾ ಕಾವೇರಿಯವರು ಮಾತನಾಡಿ, ಜಾಗೃತದಳದ ಕೆಲವು ಸದಸ್ಯರು ಪರೀಕ್ಷಾ ಕೊಠಡಿಯಲ್ಲಿ ವಿದ್ಯಾರ್ಥಿಗಳೊಂದಿಗೆ ತುಂಬಾ ಒರಟಾಗಿ ವರ್ತಿಸುತ್ತಾರೆ. ಇದರಿಂದಾಗಿ ಏನೂ ತಪ್ಪು ಮಾಡದ ಅಮಾಯಕ ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಅಡಚಣೆಯಾಗುತ್ತದೆ. ಕೆಲ ವಿದ್ಯಾರ್ಥಿಗಳು ಪರೀಕ್ಷೆಯನ್ನು ಸರಿಯಾಗಿ ಬರೆಯಲಾಗದೆ ತೊಂದರೆ ಅನುಭವಿಸಿದ್ದಾರೆ ಎಂದರು. ಎಲ್ಲಾ ಪ್ರಾಂಶುಪಾಲರು ಇದಕ್ಕೆ ಧ್ವನಿಗೂಡಿಸಿದರು. ಮುಂದುವರೆದು ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಪದವಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿನಿಯರ ಸಂಖ್ಯೆ ಹೆಚ್ಚಿದೆ. ಆದುದರಿಂದ, ಜಾಗೃತ ದಳಕ್ಕೆ ಮಹಿಳಾ ಸದಸ್ಯರನ್ನು ಕೂಡ ನೇಮಕ ಮಾಡಬೇಕು ಎಂದರು. ಮಾನ್ಯ ಕುಲಪತಿಯವರು ಮಾತನಾಡಿ ಜಾಗೃತ ದಳಕ್ಕೆ ಹಿರಿಯ ಅನುಭವಿ ಅಧ್ಯಾಪಕರನ್ನು ನೇಮಕ ಮಾಡುವಂತೆ ಸಲಹೆ ನೀಡಿದರು.

ನಿರ್ಣಯ: ಚರ್ಚೆಯ ನಂತರ ದಿನಾಂಕ:10–08–2023 ಹಾಗೂ ದಿನಾಂಕ:11–08–2023 ರಂದು ನಡೆದ ವಿದ್ಯಾರ್ಥಿಗಳ ಪರೀಕ್ಷಾ ಅಕ್ರಮ ವಿಚಾರಣಾ ಸಮಿತಿ ಸಭೆಯ ನಡಾವಳಿಗಳನ್ನು ಅನುಮೋದಿಸಿ ಸ್ಥಿರೀಕರಿಸಿದ ಸಭೆಯು, ಜಾಗೃತ ದಳವನ್ನು ನೇಮಕ ಮಾಡುವಾಗ ಮೇಲಿನ ಸಲಹೆಗಳನ್ನು ಅನುಸರಿಸಬೇಕೆಂಬುದನ್ನು ಕೂಡ ನಿರ್ಣಯಿಸಿತು.

**2023–ಸಿಂ–7.15:** 2019–20ನೇ ಸಾಲಿನ ಒಟ್ಟು 1933 ದೂರ ಶಿಕ್ಷಣದ ವಿದ್ಯಾರ್ಥಿಗಳ ಫಲಿತಾಂಶವನ್ನು ತಡೆಹಿಡಿದಿರುವ ಸಂಬಂಧ ಗೈರುಹಾಜರಿ ಎಂದು ನಮೂದಿಸುವ ಕುರಿತು.

ಚರ್ಚೆ: ಸಭೆಗೆ ಆಹ್ವಾನಿಸಲಾಗಿದ್ದ ದೂರಶಿಕ್ಷಣ ನಿರ್ದೇಶನಾಲಯದ ನಿರ್ದೇಶಕರಾದ ಪ್ರೊ.ಆರ್.ಹಿರೇಮಣಿ ನಾಯ್ಕರವರು ಮಾತನಾಡುತ್ತಾ, 2019–20ನೇ ಸಾಲಿನ ಸ್ನಾತಕ ಪದವಿಯ ಪ್ರಥಮ ಮತ್ತು ದ್ವಿತೀಯ ವರ್ಷ ಹಾಗೂ ಸ್ನಾತಕೋತ್ತರ ಪದವಿಯ ಪ್ರಥಮ ವರ್ಷದ (1 ಹಾಗೂ 2ನೇ ಸೆಮಿಸ್ಟರ್) ಒಟ್ಟು 1933

Scanned with OKEN Scanner

ವಿದ್ಯಾರ್ಥಿಗಳ ಪ್ರಮೋಟ್ ಫಲಿತಾಂಶದಲ್ಲಿ Internal Assement Blue Book not received/Admission Approval Pending/ Dissertation Marks Pending/ Practical Marks Pending/ Project Marks Pending ಮುಂತಾದ ಕಾರಣಗಳಿಂದಾಗಿ ಫಲಿತಾಂಶ ತಡೆಹಿಡಿಯಲಾಗಿದೆ. ಈ ಕುರಿತಾಗಿ ಕಲಿಕಾರ್ಥಿ ಕೇಂದ್ರಗಳಿಗೆ ಹಲವಾರು ಪತ್ರಗಳನ್ನು ಬರೆದಿದ್ದರೂ ಕೂಡ, ಅವರು ಯಾವುದೇ ಮಾಹಿತಿ ಹಾಗೂ ದಾಖಲಾತಿಗಳನ್ನು ಒದಗಿಸಿಲ್ಲ. ಈ ಹಿನ್ನೆಲೆಯಲ್ಲಿ ಸದರಿ 1933 ವಿದ್ಯಾರ್ಥಿಗಳಿಗೆ ಗೈರುಹಾಜರಿ ಎಂದು ನಮೂದಿಸಿ, ಅವರನ್ನು ಮುಂಬರುವ ಪರೀಕ್ಷೆಗಳಿಗೆ ಪುನರಾವರ್ತಿತ ವಿದ್ಯಾರ್ಥಿಗಳು ಎಂದು ಪರಿಗಣಿಸಿ ಪರೀಕ್ಷೆ ಬರೆಯಲು ಅವಕಾಶ ನೀಡುವ ಸಲುವಾಗಿ ಸಭೆಯ ಅನುಮೋದನೆಗಾಗಿ ಮಂಡಿಸಿದೆ ಎಂದರು.

ಶ್ರೀ ಬಿ.ಎನ್.ಶಶಿಧರ್‌ರವರು ಮಾತನಾಡಿ ಈವರೆಗೂ ಪ್ರವೇಶ ಅನುಮೋದನೆಯಾಗದ ವಿದ್ಯಾರ್ಥಿಗಳ ಪ್ರವೇಶವನ್ನು ರದ್ದುಗೊಳಿಸಬೇಕು ಎಂದರು. ಪ್ರೊ.ಚಂದ್ರಶೇಖರ್‌ರವರು ಮಾತನಾಡಿ ಸದರಿ ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ಶುಲ್ಕಗಳನ್ನು ಪೂರ್ಣವಾಗಿ ಪಾವತಿಸಿರುವ ಬಗ್ಗೆಪರಿಶೀಲಿಸಿ ಕ್ರಮ ಕೈಗೊಳ್ಳಬೇಕು ಎಂದರು. ಡಾ.ಸಂಧ್ಯಾಕಾವೇರಿಯವರು ಮಾತನಾಡಿ, ಕೋವಿಡ್-19ರ ಬ್ಯಾಚ್ ಆಗಿದ್ದಲ್ಲಿ ಐ.ಎ. ಅಂಕಗಳ ಆಧಾರದಲ್ಲಿ ಪಾಸ್ ಮಾಡಬಹುದು. ಆದರೆ. ಅವರು ಐ.ಎ. ಪುಸ್ತಕಗಳನ್ನೇ ಕೊಟ್ಟಿಲ್ಲವಾದರೆ, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಅವರ ಫಲಿತಾಂಶವನ್ನು ಅನುತ್ತೀರ್ಣ ಎಂದು ನಮೂದಿಸಿ, ಅವರು ಪುನರಾವರ್ತಿತ ವಿದ್ಯಾರ್ಥಿಗಳಾಗಿ ಪರೀಕ್ಷೆ ಬರೆಯಲು ಅನುವು ಮಾಡಿಕೊಡಬಹುದು ಎಂದರು.

**ನಿರ್ಣಯ:** ಸುದೀರ್ಘ ಚರ್ಚೆಯ ನಂತರ, 2019-20ನೇ ಸಾಲಿನ ಸ್ನಾತಕ ಪದವಿಯ ಪ್ರಥಮ ಮತ್ತು ದ್ವಿತೀಯ ವರ್ಷ ಹಾಗೂ ಸ್ನಾತಕೋತ್ತರ ಪದವಿಯ ಪ್ರಥಮ ವರ್ಷದ (1 ಹಾಗೂ 2ನೇ ಆವೃತ್ತಿ) ಒಟ್ಟು 1933 ವಿದ್ಯಾರ್ಥಿಗಳಲ್ಲಿ ಪೂರ್ಣ ಶುಲ್ಕ ಪಾವತಿಸಿ ಪ್ರವೇಶ ಅನುಮೋದನೆಯಾಗಿರುವ ವಿದ್ಯಾರ್ಥಿಗಳ ಫಲಿತಾಂಶವನ್ನು ಮಾತ್ರ ಗೈರುಹಾಜರಿ/ಅನುತ್ತೀರ್ಣ ಎಂದು ಪರಿಗಣಿಸಿ, ಐ.ಎ. ಪುಸ್ತಕಗಳನ್ನು ಸಲ್ಲಿಸದಿರುವ ವಿದ್ಯಾರ್ಥಿಗಳು ರಿಪೀಟರ್ ವಿದ್ಯಾರ್ಥಿಗಳಾಗಿ ಪರೀಕ್ಷೆ ಬರೆಯಲು ಸಭೆಯು ಅನುಮೋದನೆ ನೀಡಿತು.

**023-ಸಿಂ-7.16:** 2019-20ನೇ ಸಾಲಿನ ಒಟ್ಟು 982 ದೂರ ಶಿಕ್ಷಣದ ವಿದ್ಯಾರ್ಥಿಗಳನ್ನು ಪ್ರಮೋಟ್ ಮಾಡುವ ಹಾಗೂ ದ್ವಿತೀಯ ವರ್ಷದ ವಿಶೇಷ ಲಿಖಿತ ಪರೀಕ್ಷೆ ನಡೆಸುವ ಕುರಿತು.

**ನಿರ್ಣಯ:** ವಿಷಯದ ಕುರಿತು ಸುದೀರ್ಘವಾಗಿ ಚರ್ಚಿಸಿದ ನಂತರ, ಇದರೊಂದು ಗಂಭೀರ ಪ್ರಕರಣವೆಂದು ಪರಿಗಣಿಲಾಯಿತು. ಇದರ ಕುರಿತು ಸವಿವರವಾಗಿ ಪರಿಶೀಲಿಸುವ ಸಲುವಾಗಿ ಡೀನರು, ವಿಜ್ಞಾನ ನಿಕಾಯ ಇವರ ಅಧ್ಯಕ್ಷತೆಯಲ್ಲಿ ಸಿಂಡಿಕೇಟ್ ಸದಸ್ಯರಾದ ಡಾ.ಎ.ಟಿ.ಪದ್ಮೇಗೌಡ, ಪ್ರೊ.ಜಿ.ಪ್ರಶಾಂತನಾಯಕ, ಹಿರಿಯ ಪ್ರಾಧ್ಯಾಪಕರು ಹಾಗೂ ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಪಾಲನೆ ವಿಭಾಗ ಹಾಗೂ ಕುಲಸಚಿವ (ಮೌಲ್ಯಮಾಪನ)ರವರನ್ನು (ಸದಸ್ಯಕಾರ್ಯದರ್ಶಿ) ಒಳಗೊಂಡ ಒಂದು ಸಮಿತಿಯನ್ನು ರಚಿಸಲು ಅನುಮೋದಿಸಿದ ಸಭೆಯು, ಸಮಿತಿಯು ಪ್ರಕರಣದ ಕುರಿತು ಕೂಲಂಕುಶವಾಗಿ ಪರಿಶೀಲಿಸಿ 10 ದಿನಗಳಲ್ಲಿ ವರದಿ ನೀಡಬೇಕೆಂದು, ಹಾಗೂ ಸದರಿ ಸಮಿತಿ ನೀಡುವ ವರದಿ ಆಧಾರದಲ್ಲಿ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಪರೀಕ್ಷೆ ನಡೆಸುವ ಕುರಿತು ಕ್ರಮ ಕೈಗೊಳ್ಳಬೇಕೆಂದು ನಿರ್ಣಯಿಸಲಾಯಿತು.

**3-ಸಿಂ-7.16(ಎ):** ಏಕರೂಪ ಪರೀಕ್ಷಾ ಸಂಭಾವನೆಯನ್ನು ಅಳವಡಿಸಿಕೊಳ್ಳುವ ಬಗ್ಗೆ.

**ನಿರ್ಣಯ:** ಈ ವಿಷಯದ ಕುರಿತು ವಿಷಯ ಸಂಖ್ಯೆ:2023-ಸಿಂ-7.11ರಲ್ಲಿ ನಿರ್ಣಯವಾಗಿರುವ ಹಿನ್ನೆಲೆಯಲ್ಲಿ ಸರ್ಕಾರ ನಿಗದಿಪಡಿಸಿರುವ ಏಕರೂಪ ಪರೀಕ್ಷಾ ಸಂಭಾವನೆ ದರಗಳನ್ನು ವಿಶ್ವವಿದ್ಯಾಲಯದಲ್ಲಿ ಯಥಾವತ್ತಾಗಿ ಅಳವಡಿಸಲು ಸಭೆಯು ನಿರ್ಣಯಿಸಿತು.

**3-ಸಿಂ-7.16(ಬಿ):** ಎನ್.ಇ.ಪಿ. ಅಡಿಯಲ್ಲಿ ಬರುವ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿಯ ಪರೀಕ್ಷೆಗಳ ಮೌಲ್ಯಮಾಪನ ಹಾಗೂ ಫಲಿತಾಂಶ ಬಿಡುಗಡೆ ಕಾರ್ಯಗಳನ್ನು ತಜ್ಞ ಸಂಸ್ಥೆಗಳ ಮೂಲಕ ಎರವಲು ಸೇವೆ ಪಡೆದು ಕೈಗೊಳ್ಳುವ ಕುರಿತು.



Scanned with OKEN Scanner

ಚರ್ಚೆ: ಕುಲಸಚಿವ (ಮೌಲ್ಯಮಾಪನ) ರವರು ಮಾತನಾಡುತ್ತಾ, ಪರೀಕ್ಷಾ ಕಾರ್ಯಗಳನ್ನು ಕರ್ನಾಟಕ ಸರ್ಕಾರದ ಯು.ಯು.ಸಿ.ಎಂ.ಎಸ್., ತಂತ್ರಾಂಶದಲ್ಲಿ ನಿರ್ವಹಿಸುತ್ತಿದ್ದು, ವಿವಿಧ ಸ್ನಾತಕ ಪದವಿ ಪರೀಕ್ಷೆಗಳ ಫಲಿತಾಂಶವನ್ನು ಪ್ರಕಟಿಸಿದ್ದು, ಫಲಿತಾಂಶದಲ್ಲಿನ ಕೆಲವು ದೋಷಗಳನ್ನು ಸರಿಪಡಿಸಬೇಕಾಗಿದೆ ಹಾಗೂ ಅಂಕಪಟ್ಟಿ ಮತ್ತು ಮಾರ್ಕ್ಸ್ ಲೆಡ್ಜರ್ ಕಾರ್ಯಗಳು ಬಾಕಿ ಇವೆ. ಪರೀಕ್ಷಾ ವಿಭಾಗದಲ್ಲಿ ಮಾನವ ಸಂಪನ್ಮೂಲ ಹಾಗೂ ತಾಂತ್ರಿಕ ತಜ್ಞರ ಕೊರತೆ ಇದ್ದುದ್ದರಿಂದ ಗೌಪ್ಯ ಸೇರಿದಂತೆ ಪರೀಕ್ಷಾ ಕಾರ್ಯಗಳನ್ನು ತಾತ್ಕಾಲಿಕ ಸಿಬ್ಬಂದಿಗಳ ಮೂಲಕ ನಿರ್ವಹಿಸಲಾಗಿದೆ. ಇದರಿಂದಾಗಿ ಹಲವಾರು ತಾಂತ್ರಿಕ ಸಮಸ್ಯೆಗಳಾಗುತ್ತಿವೆ. ಈ ಹಿನ್ನೆಲೆಯಲ್ಲಿ ರಾಜ್ಯದ ಕೆಲವು ವಿಶ್ವವಿದ್ಯಾಲಯದವರು ಈ ಹಿಂದೆ ಪರೀಕ್ಷಾ ಕಾರ್ಯಗಳನ್ನು ನಿರ್ವಹಿಸಿದ ಹೊರಗುತ್ತಿಗೆ ಸಂಸ್ಥೆಯ ಮೂಲಕ ನಿರ್ವಹಿಸಿದ್ದು, ಇದರಿಂದಾಗಿ ಅವರು ಪರೀಕ್ಷಾ ಕಾರ್ಯಗಳಲ್ಲಿನ ದೋಷಗಳನ್ನು ನಿವಾರಿಸಿಕೊಂಡು ಶೀಘ್ರ ಫಲಿತಾಂಶ, ಅಂಕಪಟ್ಟಿ ವಿತರಣೆ ಮುಂತಾದ ಕೆಲಸ ಮಾಡುತ್ತಿದ್ದಾರೆ. ಆದುದರಿಂದ, ನಮ್ಮ ವಿಶ್ವವಿದ್ಯಾಲಯದಲ್ಲಿ ಕೂಡ ಪರೀಕ್ಷಾ ನಂತರದ ಮೌಲ್ಯಮಾಪನ ಕಾರ್ಯಗಳಲ್ಲಿ ತಾಂತ್ರಿಕ ಕೌಶಲ್ಯ, ಕಾರ್ಯಕ್ಷಮತೆ ಹಾಗೂ ಹೊಣೆಗಾರಿಕೆ ಇರುವುದರಿಂದ ಮೌಲ್ಯಮಾಪನ ಕೇಂದ್ರದಲ್ಲಿನ ಕಾರ್ಯಗಳನ್ನು ತಜ್ಞ ಸಂಸ್ಥೆಗಳ ಮೂಲಕ ಎರವಲು ಸೇವೆ ಪಡೆದು ಯು.ಯು.ಸಿ.ಎಂ.ಎಸ್., ತಂತ್ರಾಂಶದ ಪರೀಕ್ಷಾ ಕಾರ್ಯಗಳನ್ನು ನಿರ್ವಹಿಸುವ ಸಲುವಾಗಿ ಸಭೆಯ ಅನುಮೋದನೆಗೆ ಮಂಡಿಸಿದೆ ಎಂದರು.

ಡಾ.ಸಂಧ್ಯಾ ಕಾವೇರಿಯವರು ಮಾತನಾಡಿ, ಶೈಕ್ಷಣಿಕ ವೇಳಾಪಟ್ಟಿಯ ಪ್ರಕಾರ ಎಲ್ಲಾ ಕಾರ್ಯಚಟುವಟಿಕೆಗಳು ಮುಗಿಯಬೇಕು. ಪದೇಪದೇ ಮುಂದೂಡಬಾರದು. ಇದರಿಂದ ಶೈಕ್ಷಣಿಕ ವೇಳಾಪಟ್ಟಿಯನ್ನು ಸರಿದೂಗಿಸಲು ಕಷ್ಟವಾಗುತ್ತದೆ. ಸಕಾಲದಲ್ಲಿ ಪರೀಕ್ಷೆ ನಡೆಸಿ, ಮೌಲ್ಯಮಾಪನ ಮುಗಿಸಿ ಫಲಿತಾಂಶ ಪ್ರಕಟಿಸಬೇಕು. ಅಧಿಕ ದಿನಗಳ ಮೌಲ್ಯಮಾಪನದಿಂದ ಶೈಕ್ಷಣಿಕ ವೇಳಾಪಟ್ಟಿಗೆ ತೊಂದರೆ ಆಗಬಾರದು ಎಂದರು. ಡಾ.ಎ.ಟಿ.ಪದ್ಮೇಗೌಡರವರು ಮಾತನಾಡಿ, ಮೌಲ್ಯಮಾಪನ ಕೇಂದ್ರಗಳನ್ನು ಹೆಚ್ಚಿಸಿ, ಮೌಲ್ಯಮಾಪನ ಕಾರ್ಯವನ್ನು ಆದಷ್ಟು ಬೇಗನೆ ಮುಗಿಸಬಹುದು. ಮೌಲ್ಯಮಾಪನ ವಿಳಂಬವಾಗದಂತೆ ಕ್ರಮವಹಿಸಲು ಪರೀಕ್ಷಾ ಮಂಡಳಿಯ ಅಧ್ಯಕ್ಷರಿಗೆ ಕಟ್ಟುನಿಟ್ಟಿನ ಆದೇಶ ನೀಡಬೇಕೆಂದರು. ಶ್ರೀ ಬಿ.ಎನ್.ಶಶಿಧರ್ ರವರು ಮಾತನಾಡಿ ಮೌಲ್ಯಮಾಪನ ಸೇರಿದಂತೆ ಪರೀಕ್ಷಾ ಕಾರ್ಯದಲ್ಲಿ ಸರಿಯಾಗಿ ಭಾಗವಹಿಸದ ಅಧ್ಯಾಪಕರ ವಿರುದ್ಧ ಕರ್ನಾಟಕ ಶಿಕ್ಷಣ ಕಾಯ್ದೆ ಅಡಿಯಲ್ಲಿ ಸೂಕ್ತ ಕ್ರಮ ಜರುಗಿಸಲು ಸರ್ಕಾರಕ್ಕೆ ಪತ್ರ ಬರೆಯಬೇಕು ಎಂದರು.

ನಿರ್ಣಯ: ಸುಧೀರ್ಘ ಚರ್ಚೆಯ ನಂತರ ಮೌಲ್ಯಮಾಪನ ಕೇಂದ್ರದಲ್ಲಿನ ಕಾರ್ಯಗಳನ್ನು ತಜ್ಞ ಸಂಸ್ಥೆಗಳ ಮೂಲಕ ಎರವಲು ಸೇವೆ ಪಡೆದು ಪರೀಕ್ಷಾ ಕಾರ್ಯಗಳನ್ನು ನಿರ್ವಹಿಸುವ ಸಲುವಾಗಿ ಇದನ್ನು ಈಗಾಗಲೇ ಅಳವಡಿಸಿಕೊಂಡಿರುವ ಬೇರೆ ವಿಶ್ವವಿದ್ಯಾಲಯಗಳಿಂದ ವಿವರವಾದ ಮಾಹಿತಿಗಳನ್ನು ಪಡೆದುಕೊಂಡು, ಇದನ್ನು ನಮ್ಮ ವಿಶ್ವವಿದ್ಯಾಲಯದಲ್ಲಿ ಅಳವಡಿಸಿದಲ್ಲಿ ತಗುಲಬಹುದಾದ ಖರ್ಚುವೆಚ್ಚಗಳ ವಿವರ, ಅನುಷ್ಠಾನದ ವಿಧಾನ ಮುಂತಾದ ವಿವರಗಳೊಂದಿಗೆ ಮುಂದಿನ ಸಿಂಡಿಕೇಟ್ ಸಭೆಗೆ ವಿಷಯ ಮಂಡಿಸುವಂತೆ ನಿರ್ಣಯಿಸಿದ ಸಭೆಯು, ಸದಸ್ಯರುಗಳು ನೀಡಿರುವ ಸಲಹೆಗಳ ಕುರಿತು ಕ್ರಮವಹಿಸಲು ಅನುಮತಿಸಿತು.

23–ಸಿಂ–7.16(ಸಿ): ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಖಾಯಂ ಅಧ್ಯಾಪಕರುಗಳ ಪಿಹೆಚ್.ಡಿ. ಪದವಿ ದಾಖಲೆಗಳ ನೈಜತೆ ಪರಿಶೀಲನೆಗೆ ಶುಲ್ಕ ವಿನಾಯಿತಿ ನೀಡುವ ಬಗ್ಗೆ.

ಕುಲಸಚಿವ(ಮೌಲ್ಯಮಾಪನ)ರವರು ಮಾತನಾಡುತ್ತಾ, ವಿಶ್ವವಿದ್ಯಾಲಯಕ್ಕೆ ಅಂಕಪಟ್ಟಿ, ಪದವಿ ಪ್ರಮಾಣಪತ್ರ ಮುಂತಾದವುಗಳ ನೈಜತೆ ಪರಿಶೀಲನೆಗಾಗಿ ಸಲ್ಲಿಕೆಯಾಗುವ ಪ್ರಕರಣಗಳಲ್ಲಿ ನಿಗದಿತ ಶುಲ್ಕ ಪಡೆಯಲಾಗುತ್ತಿದೆ. ಆದರೆ, ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ಪತ್ರ ಸಂಖ್ಯೆ: ಇಡಿ 109 ಯುಎನ್ಇ 2022, ದಿನಾಂಕ: 29–03–2022ರಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು/ಖಾಸಗಿ ಅನುದಾನಿಕ ಪ್ರಥಮ ದರ್ಜೆ ಕಾಲೇಜುಗಳ ಖಾಯಂ ಅಧ್ಯಾಪಕರುಗಳ ಪಿಹೆಚ್.ಡಿ. ದಾಖಲೆಗಳ ನೈಜತೆ ಪರಿಶೀಲನೆಗೆ ವಿಶ್ವವಿದ್ಯಾಲಯವು ವಿಧಿಸುವ ಶುಲ್ಕದಿಂದ ವಿನಾಯಿತಿ ನೀಡುವಂತೆ ತಿಳಿಸಿದ್ದಾರೆ. ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲದ ದೃಷ್ಟಿಯಿಂದ ಮರುಪರಿಶೀಲಿಸುವಂತೆ ಸರ್ಕಾರಕ್ಕೆ



Scanned with OKEN Scanner

ಪ್ರಸ್ತಾವನೆ ಸಲ್ಲಿಸುವ ಬಗ್ಗೆ ಸಭೆಯ ಅನುಮೋದನೆಗಾಗಿ ಮಂಡಿಸಿದೆ ಎಂದರು. ಕುಲಪತಿಯವರು ಮಾತನಾಡುತ್ತಾ, ಈಗಾಗಲೇ ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲ ಕಡಿಮೆಯಾಗುತ್ತಿದ್ದು, ಈ ರೀತಿ ಯು.ಜಿ.ಸಿ. ವೇತನ ಪಡೆಯುವ ಅಧ್ಯಾಪಕರಿಗೆ ಕೂಡ ಶುಲ್ಕ ವಿನಾಯಿತಿ ನೀಡುವುದು ಸರಿಯಲ್ಲ ಎಂದರು. ಎಲ್ಲಾ ಸದಸ್ಯರು ಇದಕ್ಕೆ ಧ್ವನಿಗೂಡಿಸಿದರು.

**ನಿರ್ಣಯ:** ಚರ್ಚೆಯ ನಂತರ, ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲದಲ್ಲಿ ಕೊರತೆಯಾಗುತ್ತಿರುವ ಹಿನ್ನೆಲೆಯಲ್ಲಿ ಸರ್ಕಾರಿ/ಖಾಸಗಿ ಕಾಲೇಜುಗಳ ಅಧ್ಯಾಪಕರ ಅಂಕಪಟ್ಟಿ/ಪದವಿ ಪ್ರಮಾಣ ಪತ್ರ/ ಪಿಹೆಚ್.ಡಿ. ಪದವಿ ಪ್ರಮಾಣ ಪತ್ರ ಸೇರಿದಂತೆ ಎಲ್ಲಾ ಶೈಕ್ಷಣಿಕ ದಾಖಲೆಗಳ ನೈಜತೆ ಪರಿಶೀಲನೆಗೆ ಶುಲ್ಕದಿಂದ ವಿನಾಯಿತಿ ನೀಡುವಂತೆ ಸರ್ಕಾರವು ಬರೆದಿರುವ ಪತ್ರವನ್ನು ಮರು ಪರಿಶೀಲಿಸಿ, ವಿಶ್ವವಿದ್ಯಾಲಯವು ನೈಜತೆ ಪರಿಶೀಲನೆಗೆ ಸಂಬಂಧಿಸಿದಂತೆ ಕಾಲ ಕಾಲಕ್ಕೆ ನಿಗದಿಪಡಿಸಿರುವ ಶುಲ್ಕಗಳನ್ನು ಸಂಬಂಧಪಟ್ಟ ಅಧ್ಯಾಪಕರೇ ಭರಿಸುವಂತೆ ಮರು ಆದೇಶ ನೀಡುವಂತೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಸಭೆಯು ಸರ್ವಾನುಮತದಿಂದ ನಿರ್ಣಯಿಸಿತು.

## ಹಣಕಾಸು ವಿಭಾಗ

**2023–ಸಿಂ–7.17:** 2022–23ನೇ ಆರ್ಥಿಕ ವಾರ್ಷಿಕ ಲೆಕ್ಕಗಳನ್ನು ಪರಿಶೀಲನೆ ಹಾಗೂ ಅನುಮೋದನೆ ಕುರಿತು.

**ನಿರ್ಣಯ:** ಚರ್ಚೆಯ ನಂತರ ಹಣಕಾಸು ಅಧಿಕಾರಿಗಳು ಮಂಡಿಸಿದ ವಿಶ್ವವಿದ್ಯಾಲಯದ 2022–23ನೇ ಆರ್ಥಿಕ ವರ್ಷದ ವಾರ್ಷಿಕ ಲೆಕ್ಕಗಳ ಕರಡನ್ನು ಸಭೆಯು ಅನುಮೋದಿಸಿತು.

**2023–ಸಿಂ–7.18:** 2019–20 ಹಾಗೂ 2020–21ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿಗಳ ಅನುಪಾಲನಾ ವರದಿಗಳ ಅನುಮೋದನೆ ಕುರಿತು.

**ನಿರ್ಣಯ:** ಸುದೀರ್ಘ ಚರ್ಚೆಯ ನಂತರ, ಅಡ್‌ಹಾಕ್ ಸಮಿತಿ ಸಭೆಗೆ ಅಗತ್ಯ ಮಾಹಿತಿ ಮತ್ತು ದಾಖಲೆಗಳನ್ನು ಒದಗಿಸುವುದರ ಮೂಲಕ ಆಕ್ಷೇಪಣಾ ಪ್ಯಾರಾಗಳನ್ನು ಕಡಿಮೆ ಮಾಡಿಸಲು ಕ್ರಮ ವಹಿಸುವಂತೆ ಸೂಚಿಸಿದ ಸಭೆಯು, 2019–20 ಹಾಗೂ 2020–21ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿಗಳ ಅನುಪಾಲನಾ ವರದಿಗಳನ್ನು ಅನುಮೋದಿಸಿತು.

**2023–ಸಿಂ–7.19:** 2023–24ನೇ ಆರ್ಥಿಕ ವರ್ಷದ ಪ್ರಥಮ ಹಣಕಾಸು ಸಮಿತಿ ಸಭೆಯ ನಡಾವಳಿಗಳ ಅನುಮೋದನೆ ಕುರಿತು.

**ಚರ್ಚೆ:** ಸಭೆಗೆ ವಿಶೇಷ ಆಹ್ವಾನಿತರಾಗಿ ಆಗಮಿಸಿದ್ದ ಹಣಕಾಸು ಅಧಿಕಾರಿಗಳಾದ ಶ್ರೀ. ಬಂಗಾರಪ್ಪ ಇವರು ದಿನಾಂಕ: 09–11-2023ರಂದು ನಡೆದ 2023–24ನೇ ಸಾಲಿನ ಪ್ರಥಮ ಹಣಕಾಸು ಸಮಿತಿ ಸಭೆಯ ನಡಾವಳಿಗಳನ್ನು ಅನುಮೋದನೆಗಾಗಿ ಮಂಡಿಸಿದರು. ಸದಸ್ಯರಾದ ಶ್ರೀ ಬಿ.ಎಸ್.ಶಶಿಧರ್‌ರವರು ಹಣಕಾಸು ಸಮಿತಿ ಸಭೆಯ ವಿಷಯ ಸಂಖ್ಯೆ:6.5ರ ಕುರಿತು ಮಾತನಾಡುತ್ತಾ, ನಾಲ್ವರು ಹಂಗಾಮಿ ವಾಹನ ಚಾಲಕರು ಬಹಳ ವರ್ಷಗಳಿಂದ ಸಂಚಿತ ವೇತನದ ಆಧಾರದಲ್ಲಿ ಕೆಲಸ ನಿರ್ವಹಿಸುತ್ತಿದ್ದು, ಮಾನವೀಯ ನೆಲೆಯಲ್ಲಿ ಅವರ ಸೇವೆಯನ್ನು ಮುಂದುವರಿಸುವಂತೆ ಕೋರಿದರು. ಕುಲಸಚಿವರು ಮಾತನಾಡಿ, ಸಂಚಿತ ವೇತನದಲ್ಲಿ ತೆಗೆದುಕೊಳ್ಳಲು ಅವಕಾಶವಿಲ್ಲ. ಆದುದರಿಂದ, ಅವರನ್ನು ಹೊರಗುತ್ತಿಗೆ ಮೂಲಕ ನೇಮಕ ಮಾಡಿಕೊಂಡು ಮುಂದುವರಿಸಬಹುದು ಎಂದರು. ಡಾ.ಎ.ಟಿ.ಪದ್ಮೇಗೌಡರವರು ಮಾತನಾಡಿ, ವಾಹನ ಚಾಲಕರು ಮಂಜೂರಾಗಿರುವ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇವರುಗಳ ವಿನಿಯಮವನ್ನು ಸಿದ್ಧಪಡಿಸಿ ಸರ್ಕಾರದ ಅನುಮೋದನೆಗೆ ಸಲ್ಲಿಸಲಾಗಿದೆ. ಅವರ ವೇತನವನ್ನು ಆಂತರಿಕ ಸಂಪನ್ಮೂಲದಿಂದ ಪಾವತಿಸುತ್ತಿರುವ ಹಿನ್ನೆಲೆಯಲ್ಲಿ ವಿನಿಯಮ ಅನುಮೋದನೆ ಆಗಿ ಬರುವವರೆಗೆ ಅವರ ಸೇವೆಯನ್ನು ಯಥಾಸ್ಥಿತಿಯಲ್ಲಿ ಮುಂದುವರಿಸಬಹುದು ಎಂದರು. ಡಾ.ಸಂಧ್ಯಾಕಾವೇರಿರವರು ಮಾತನಾಡಿ, ವಾಹನ ಚಾಲಕರ ಕೆಲಸವು ಅತ್ಯಗತ್ಯ ಸೇವೆಯಾಗಿದ್ದು, ಹಗಲು–ರಾತ್ರಿ ದುಡಿಯುತ್ತಿದ್ದಾರೆ. ಹೊರಗುತ್ತಿಗೆಯಡಿ ಪರಿಗಣಿಸಿದಲ್ಲಿ ಅವರ ಮಾಸಿಕ ವೇತನ ಕಡಿಮೆಯಾಗಿ ಜೀವನ ನಿರ್ವಹಣೆ ಕಷ್ಟವಾಗುತ್ತದೆ ಎಂದರು. ಕುಲಸಚಿವ(ಮೌಲ್ಯಮಾಪನ)ರವರು ಮಾತನಾಡಿ ಮಾನವೀಯ ದೃಷ್ಟಿಯಿಂದ ಸರ್ಕಾರದ



Scanned with OKEN Scanner

ಅನುಮೋದನೆ ಬರುವವರೆಗೆ ಯಥಾಸ್ಥಿತಿಯಲ್ಲಿ ಮುಂದುವರಿಸಬಹುದು ಎಂದರು.

ಮುಂದುವರಿದು ಮಾತನಾಡಿದ ಕುಲಸಚಿವರು ಮಾತನಾಡಿ, ವಿದ್ಯಾರ್ಥಿ ಸಂಬಂಧಿತ ಕಾರ್ಯಚಟುವಟಿಕೆಗಳನ್ನು ಹೊರತುಪಡಿಸಿ ಬೇರೆ ಉದ್ದೇಶಗಳಿಗೆ ಎ.ಸಿ. ಬಿಲ್ಲಿನಲ್ಲಿ ಮುಂಗಡ ಪಾವತಿಸುವುದನ್ನು ಕಡಿಮೆ ಮಾಡಬೇಕೆಂದರು. ಸದಸ್ಯರಾದ ಶ್ರೀ ಬಿ.ಎನ್.ಶಶಿಧರ್‌ರವರು ಮಾತನಾಡಿ ಹಣಕಾಸು ಸಮಿತಿಯಲ್ಲಿ ಸಿಂಡಿಕೇಟ್ ಸದಸ್ಯರು ಇಲ್ಲದಿರುವ ಬಗ್ಗೆ ಆಕ್ಷೇಪಿಸಿದರು. ಮಾನ್ಯ ಕುಲಪತಿಯವರು ಮಾತನಾಡಿ ದಿನಾಂಕ:27–07–2023ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಶ್ರೀ ಬಿ.ಎನ್.ಶಶಿಧರ್‌ರವರನ್ನು ಸಿಂಡಿಕೇಟ್‌ನಿಂದ ಹಣಕಾಸು ಸಮಿತಿಗೆ ನಾಮನಿರ್ದೇಶನ ಮಾಡಲಾಗಿದೆ. ಆದರೆ, ಸದರಿ ಸಭೆಯ ನಡಾವಳಿಗಳಿಗೆ ಈವರೆಗೂ ಆಗಿನ ಕುಲಸಚಿವರು ಮತ್ತು ಕುಲಪತಿಯವರ ಸಹಿಯಾಗಿಲ್ಲದಿರುವುದರಿಂದ ನೇಮಕ ಆಗಿಲ್ಲ ಎಂದರು. ಕುಲಸಚಿವರು ಮಾತನಾಡಿ, ಈ ಸಭೆಯಲ್ಲಿಯೇ ಶ್ರೀ ಬಿ.ಎನ್.ಶಶಿಧರ್‌ರವರನ್ನು ಸಿಂಡಿಕೇಟ್‌ನಿಂದ ಹಣಕಾಸು ಸಮಿತಿಗೆ ಮತ್ತೊಮ್ಮೆ ನಾಮನಿರ್ದೇಶನ ಮಾಡಬಹುದು ಎಂದರು.

**ನಿರ್ಣಯ:** ಚರ್ಚೆಯ ನಂತರ, ದಿನಾಂಕ: 09–11–2023ರಂದು ನಡೆದ 2023–24ನೇ ಸಾಲಿನ ಪ್ರಥಮ ಹಣಕಾಸು ಸಮಿತಿ ಸಭೆಯ ನಡಾವಳಿಗಳನ್ನು ಅನುಮೋದಿಸಿದ ಸಭೆಯು, ಶ್ರೀ ಬಿ.ಎನ್.ಶಶಿಧರ ರವರನ್ನು ಸಿಂಡಿಕೇಟ್‌ನಿಂದ ಹಣಕಾಸು ಸಮಿತಿಗೆ ಸದಸ್ಯರಾಗಿ ನಾಮನಿರ್ದೇಶನ ಮಾಡಲು ಸರ್ವಾನುತದಿಂದ ನಿರ್ಣಯಿಸಿತು.

## ಅಭಿವೃದ್ಧಿ ವಿಭಾಗ

**2023–ಸಿಂ–7.19(ಎ):** DR. ARTHOS SOLUTIONS PVT. LTD., ಇವರೊಂದಿಗೆ ಸ್ನಾತಕೋತ್ತರ ರಸಾಯನಶಾಸ್ತ್ರ ವಿಭಾಗ, ಕುವೆಂಪು ವಿಶ್ವವಿದ್ಯಾಲಯ ಒಡಂಬಡಿಕೆಯನ್ನು ಮಾಡಿಕೊಳ್ಳುವ ಕುರಿತು.

ವಿಶ್ವವಿದ್ಯಾಲಯದ ಸ್ನಾತಕೋತ್ತರ ರಸಾಯನಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗವು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಸಂಶೋಧನೆ ಹಾಗೂ ತರಬೇತಿ/ಕೌಶಲ್ಯ ಅಭಿವೃದ್ಧಿ ಮುಂತಾದ ಚಟುವಟಿಕೆಗಳಿಗೆ ಹಾಗೂ ಸ್ಥಳೀಯ ಕೃಷಿಕರಿಗೆ ಉಪಯುಕ್ತವಾಗುವಂತಹ Black Soldier Larvae related chemical aspects like organic solid waste management, animal feed, organis fertilizer, biodiesel production ಮುಂತಾದವುಗಳ ಕುರಿತು ಸಂಶೋಧನೆ ಕೈಗೊಳ್ಳಲು ಅನುಕೂಲವಾಗುವಂತೆ DR. Arthos Solutions Pvt. Ltd., Dharmavaram, Ananthapura District, Andra Praesh ಇವರೊಂದಿಗೆ ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲು ಸಭೆಯು ಅನುಮತಿಸಿತು.

**2023–ಸಿಂ–7.20:** **ಸದಸ್ಯರು ಮಂಡಿಸಿರುವ ಪ್ರಸ್ತಾವನೆಗಳು**

ಡಾ. ಎ. ಟಿ. ಪದ್ಮೇಗೌಡ

ಡಾ. ಸಂಧ್ಯಾಕಾವೇರಿ ಕೆ.

ಡಾ. ಕೆ. ಚಂದ್ರಶೇಖರ್

ಶ್ರೀ ಶಶಿಧರ್ ಬಿ.ಎನ್.

ಡಾ. ಎಂ. ಸ್ವಾಮಿ

ಶ್ರೀ ಶಾಂತಕುಮಾರ್ ಜಿ.ಎಸ್.

23–ಸಿಂ–7

**2023–ಸಿಂ–7.20(ಎ)** **ಡಾ. ಎ. ಟಿ. ಪದ್ಮೇಗೌಡ**

1) 2015–16ರ ಸಾಲಿನಿಂದ 2018–19ರವರೆಗೆ ವಿವಿಧ ದೂರ ಶಿಕ್ಷಣ ಅಧ್ಯಯನ ಕೇಂದ್ರಗಳಿಂದ ಬಾಕಿ ಎಷ್ಟು ವಿಶ್ವವಿದ್ಯಾಲಯಕ್ಕೆ ಬರಬೇಕು. ಬಾಕಿ ಪಾವತಿಸಿದ ಬ್ಯಾಂಕ್ ಸ್ಕ್ರೋಲ್ ಮಾಡಿದ ಚಲನ್ ಪ್ರತಿ ನೀಡುವುದು.

ಚಲನ್ ಪ್ರತಿಗಳ ಬಹಳ ದೊಡ್ಡ ದೊಡ್ಡ ಬಂಡಲ್‌ಗಳಿರುವುದರಿಂದ, ಮಾಹಿತಿಯನ್ನು ತ:ಕ್ಷಣ್ತೆಯಲ್ಲಿ



Scanned with OKEN Scanner

ಸಿದ್ಧಪಡಿಸಿ ಸದಸ್ಯರಿಗೆ ಒದಗಿಸಲಾಯಿತು ಹಾಗೂ ದೂರಶಿಕ್ಷಣ ನಿರ್ದೇಶನಾಲಯದ ಕಛೇರಿಯಲ್ಲಿ ಚಲನ್‌ಗಳನ್ನು ಖುದ್ದು ವೀಕ್ಷಿಸಲು ಅವಕಾಶ ನೀಡುವುದಾಗಿ ತಿಳಿಸಲಾಯಿತು.

2) ಕಾಕಡೆ ಬಾಬುರಾವ್ ದೂರ ಶಿಕ್ಷಣ ವಿವಿಧ ಅಧ್ಯಯನ ಕೇಂದ್ರಗಳಿಂದ ಬಾಕಿ ಬರಬೇಕಾದ ಮೊತ್ತವೆಷ್ಟು? ಬಾಕಿ ವಸೂಲಿಗೆ ತೆಗೆದುಕೊಂಡ ಕ್ರಮಗಳ ವರದಿಯನ್ನು ದಾಖಲೆಯೊಂದಿಗೆ ನೀಡುವುದು.

ಸಭೆಯಲ್ಲಿ ಆಹ್ವಾನಿತರಾಗಿದ್ದ ದೂರಶಿಕ್ಷಣ ನಿರ್ದೇಶನಾಲಯದ ನಿರ್ದೇಶಕರಾದ ಪ್ರೊ.ಆರ್. ಹಿರೇಮಣಿನಾಯ್ಕ್‌ರವರು ಮಾಹಿತಿ ನೀಡುತ್ತಾ, ಸದಸ್ಯರು ಕೋರಿರುವ ಮಾಹಿತಿಗಳನ್ನು ತ:ಖ್ತೆಯಲ್ಲಿ ಒದಗಿಸಿದ್ದು, ಶ್ರೀ ಬಾಬುರಾವ್‌ರವರ ಕಾಕಡೆ ಸೇರಿದಂತೆ ವಿವಿಧ ಅಧ್ಯಯನ ಕೇಂದ್ರಗಳ ವಿರುದ್ಧ ನ್ಯಾಲಯಾಲಯದಲ್ಲಿ 16 ಪ್ರಕರಣಗಳನ್ನು ದಾಖಲಿಸಲಾಗಿತ್ತು. ಇದರಲ್ಲಿ 15 ಪ್ರಕರಣಗಳು ವಜಾಗೊಂಡಿವೆ. ಈ ಹಿನ್ನೆಲೆಯಲ್ಲಿ ಡಿವಿಜನಲ್ ಬೆಂಚ್‌ಗೆ ಅಪೀಲ್ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು. ಕುಲಸಚಿವರು ಮಾತನಾಡಿ, ಅವರಿಂದ ಸುಮಾರು ನಾಲ್ಕು ಕೋಟಿ ರೂಪಾಯಿಗಳಿಗಿಂತಲೂ ಅಧಿಕ ಹಣ ಬಾಕಿ ಇರುವುದರಿಂದ ಸಿಂಡಿಕೇಟ್ ಸದಸ್ಯರು ಹಾಗೂ ವಕೀಲರಾಗಿರುವ ಶ್ರೀ ಬಿ.ಎನ್.ಶಶಿಧರರವರೊಂದಿಗೆ ಚರ್ಚಿಸಿ ಉತ್ತಮ ಅಡ್ವೋಕೇಟ್ ಒಬ್ಬರನ್ನು ಇದಕ್ಕಾಗಿ ನೇಮಕ ಮಾಡಿಕೊಂಡು, ಅವರಿಗೆ ವಿಶ್ವವಿದ್ಯಾಲಯವು ಎಲ್ಲಾ ಮಾಹಿತಿ ಮತ್ತು ದಾಖಲೆಗಳನ್ನು ಸಮರ್ಪಕವಾಗಿ ಒದಗಿಸಬೇಕು. ಈ ಮೂಲಕ ನ್ಯಾಯಾಲಯದಲ್ಲಿ ವಿಶ್ವವಿದ್ಯಾಲಯದ ಪರವಾಗಿ ತೀರ್ಪು ಬಂದಲ್ಲಿ ಕೋಟ್ಯಾಂತರ ಹಣ ಬರುತ್ತದೆ ಎಂದರು. ಎಲ್ಲಾ ಸದಸ್ಯರು ಇದನ್ನು ಅನುಮೋದಿಸಿದರು ಹಾಗೂ ಈ ನಿಟ್ಟಿನಲ್ಲಿ ತ್ವರಿತ ಕ್ರಮವಹಿಸುವಂತೆ ತಿಳಿಸಿದರು.

3) ಸೈಕಲ್–1, ಸೈಕಲ್–2ರ ಅಡಿಯಲ್ಲಿ ಎಷ್ಟು ಅಧ್ಯಯನ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಈ ಅವಧಿಯಲ್ಲಿ ವಿದ್ಯಾರ್ಥಿಗಳ ದಾಖಲಾತಿ ಎಷ್ಟು? ಸಂಗ್ರಹಿಸಲಾದ ಒಟ್ಟು ಶುಲ್ಕದ ಮೊತ್ತವೆಷ್ಟು. ಬಾಕಿ ಉಳಿಸಿಕೊಂಡು ಪಾವತಿಸಿರುವ ಕೇಂದ್ರಗಳ ಬ್ಯಾಂಕ್ ಸ್ಕ್ರೋಲ್ ಚಲನ್ ಪ್ರತಿ ನೀಡುವುದು.

ಮಾಹಿತಿಯನ್ನು ತ:ಖ್ತೆಯಲ್ಲಿ ಸಿದ್ಧಪಡಿಸಿ ಒದಗಿಸಲಾಯಿತು ಹಾಗೂ ಮಾನ್ಯ ಸದಸ್ಯರಿಗೆ ದೂರಶಿಕ್ಷಣ ನಿರ್ದೇಶನಾಲಯದ ಕಛೇರಿಯಲ್ಲಿ ಚಲನ್‌ಗಳನ್ನು ಖುದ್ದು ವೀಕ್ಷಿಸಲು ಅವಕಾಶ ನೀಡುವುದಾಗಿ ತಿಳಿಸಲಾಯಿತು.

4) ಕಳೆದ 2023 ಆಗಸ್ಟ್, ಸೆಪ್ಟೆಂಬರ್, ನವೆಂಬರ್‌ನಲ್ಲಿ ನಡೆಸಿದ ವಿವಿಧ ವಿಭಾಗಗಳ ಮೌಲ್ಯಮಾಪನ ಕಾರ್ಯಕ್ಕೆ ಗೈರು ಹಾಜರಾದ ಯುಜಿಸಿ ಅಧ್ಯಾಪಕರಿಗೆ ನೋಟೀಸ್ ನೀಡಿರುವ

ಕುಲಸಚಿವ (ಮೌಲ್ಯಮಾಪನ)ರವರು ಮಾಹಿತಿ ನೀಡುತ್ತಾ, ಆಗಸ್ಟ್/ಸೆಪ್ಟೆಂಬರ್/ನವೆಂಬರ್–2023ರ ಪರೀಕ್ಷೆಯ ವಿವಿಧ ವಿಷಯಗಳ ಮೌಲ್ಯಮಾಪನ ಕಾರ್ಯಕ್ಕೆ ಗೈರು ಹಾಜರಾಗಿದ್ದ 07 ಅಧ್ಯಾಪಕರುಗಳಿಗೆ ಕರ್ನಾಟಕ ಶಿಕ್ಷಣ ಮಸೂದೆ 1983 ಸೆಕ್ಷನ್ 28 ಮತ್ತು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ಅನ್ವಯ ಪರೀಕ್ಷಾ ಕಾರ್ಯ ಕಡ್ಡಾಯವಾಗಿದ್ದು, ಕರ್ತವ್ಯಗಳ ಉಲ್ಲಂಘನೆಯು ಶಿಕ್ಷಾರ್ಹವಾಗಿರುತ್ತದೆ ಎಂದು ತಿಳಿಸಿ ಕಾರಣ ಕೇಳಿ ನೋಟಿಸ್ ನೀಡಲಾಗಿದೆ ಎಂದರು. ಸುದೀರ್ಘ ಚರ್ಚೆಯ ನಂತರ, ಇನ್ನು ಮುಂದೆ ಪರೀಕ್ಷಾ ಕಾರ್ಯಗಳಲ್ಲಿ ಭಾಗವಹಿಸದ ಅಧ್ಯಾಪಕರ ವಿರುದ್ಧ ಸರ್ಕಾರಕ್ಕೆ ವರದಿ ಮಾಡುವಂತೆ ಸಭೆಯು ನಿರ್ಣಯಿಸಿತು.

**3–ಸಿಂ–7.20(ಬಿ): ಡಾ. ಸಂಧ್ಯಾಕಾವೇರಿ, ಕೆ.,**

1) Some of the colleges have not yet received their share of fee amount paid by the students during their admission through UUCMS during 2021-22 academic year. The principals of such colleges requested the university several times and it was discussed in the earlier syndicate meetings too. As the problem was not solved the immediate discussion is requested.

ಕುಲಸಚಿವರು ಮಾಹಿತಿ ನೀಡುತ್ತಾ, 2021–22ನೇ ಶೈಕ್ಷಣಿಕ ಸಾಲಿಗೆ ವಿಶ್ವವಿದ್ಯಾಲಯಕ್ಕೆ ಯು.ಯು.ಸಿ.ಎಂ.ಎಸ್. ಮೂಲಕ ಪಾವತಿಸಬೇಕಾದ ಮೊತ್ತ ಮಾತ್ರ ಪಾವತಿಯಾಗಿರುತ್ತದೆ.



Scanned with OKEN Scanner

ಉಳಿದಂತೆ ಹೆಚ್ಚುವರಿ ಮೊತ್ತ ಪಾವತಿಸಿದ್ದಲ್ಲಿ ಸರ್ಕಾರದ ಸಂಸ್ಥೆಯಾದ ಎನ್.ಎಸ್.ಡಿ.ಎಲ್.ಗೆ ಜಮೆಯಾಗಿರುವುದರಿಂದ ಈ ಕುರಿತು ಸದರಿ ಸಂಸ್ಥೆಯ ಹೆಲ್ಪ್‌ಲೈನ್ ಅಥವಾ ಪತ್ರ ಮುಖೇನ ಸಂಪರ್ಕಿಸಿ ಸಮಸ್ಯೆಯನ್ನು ಪರಿಹರಿಸಿಕೊಳ್ಳಬೇಕಾಗಿದೆ ಎಂದರು. ಚರ್ಚೆಯ ನಂತರ, ಬಾಕಿ ಹಣ ಕಾಲೇಜುಗಳಿಗೆ ಪಾವತಿಸಲು ಹಾಗೂ ಕಾಲೇಜುಗಳಿಂದ ಬರಬೇಕಾಗಿರುವ ಹಣ ಪಡೆದುಕೊಳ್ಳುವ ಸಲುವಾಗಿ ಶೈಕ್ಷಣಿಕ ವಿಭಾಗ ಹಾಗೂ ಹಣಕಾಸು ವಿಭಾಗದವರು ಸಂಬಂಧಪಟ್ಟ ಕಾಲೇಜುಗಳ ಪ್ರಾಂಶುಪಾಲರನ್ನು ಅಗತ್ಯ ದಾಖಲೆಗಳೊಂದಿಗೆ ಕರೆಸಿಕೊಂಡು, ಪರಿಶೀಲಿಸಿ, ಕ್ರಮ ಕೈಗೊಳ್ಳಲು ಸಭೆಯು ನಿರ್ಣಯಿಸಿತು.

3–ಸಿಂ–7.2

2) There are confusions regarding SEC course papers to be conducted in 5th semester and 6th semester. The colleges need directions from the university regarding choice of paper, number of classes, qualified teacher/dept. scheme of exam. The university should arrange a workshop or training at the earliest.

ಸಭೆಗೆ ಆಹ್ವಾನಿತರಾಗಿದ್ದ ಯು.ಯು.ಸಿ.ಎಂ.ಎಸ್. ನೋಡಲ್ ಅಧಿಕಾರಿಯವರಾದ ಪ್ರೊ. ಸೈಯದ್ ಅಶ್ಫಕ್ ಅಹ್ಮದ್‌ರವರು ಮಾಹಿತಿ ನೀಡುತ್ತಾ, ವಿಶ್ವವಿದ್ಯಾಲಯವು Skill Enhancement Cource (SEC) - ಅಡಿಯಲ್ಲಿ ಸ್ನಾತಕ ಪದವಿಯ 5ನೇ ಸೆಮಿಸ್ಟರ್‌ನಲ್ಲಿ ಎರಡು ಪತ್ರಿಕೆಗಳಾದ Employability Skills and Cyber Security ಗಳನ್ನು ಅಳವಡಿಸಿಕೊಂಡಿದ್ದು, ವಿದ್ಯಾರ್ಥಿಗಳು ಇದರಲ್ಲಿ ಯಾವುದಾದರೊಂದು ಪತ್ರಿಕೆಯನ್ನು ಆಯ್ಕೆ ಮಾಡಿಕೊಳ್ಳಬೇಕು. ಈ ಪತ್ರಿಕೆಗಳು 3 ಕ್ರೆಡಿಟ್‌ಗಳನ್ನು ಹೊಂದಿವೆ. Cyber Security ಪತ್ರಿಕೆಯನ್ನು ಕಂಪ್ಯೂಟರ್ ಸೈನ್ಸ್ ವಿಭಾಗದ ಅಧ್ಯಾಪಕರು ಬೋಧಿಸಬೇಕಾಗಿದ್ದು, Employability Skillsನ್ನು ಯಾವುದೇ ಅನುಭವಿ ಅಧ್ಯಾಪಕರು ಬೋಧಿಸಬಹುದು ಎಂದರು. ಮುಂದುವರೆದು ಮಾತನಾಡಿದ ಅವರು, 6ನೇ ಸೆಮಿಸ್ಟರ್‌ನಲ್ಲಿ ವಿದ್ಯಾರ್ಥಿಗಳು ಇಂಟರ್‌ಶಿಪ್ ಅಥವಾ ಪ್ರಾಜೆಕ್ಟ್‌ಗಳಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳಬೇಕಾಗಿದ್ದು, ಇದಕ್ಕೆ 2 ಕ್ರೆಡಿಟ್‌ಗಳಿವೆ. ಇವುಗಳ ಕುರಿತಾಗಿ ಕಾಲೇಜುಗಳ ಪ್ರಾಂಶುಪಾಲರಿಗೆ ಈಗಾಗಲೇ ಮಾಹಿತಿ ನೀಡಲಾಗಿದೆ ಎಂದರು. ಡಾ.ಸಂಧ್ಯಾ ಕಾವೇರಿರವರು ಮಾತನಾಡಿ, ಇದರ ಕುರಿತಾಗಿ ಎಲ್ಲಾ ಮಾಹಿತಿಗಳನ್ನು ಒಳಗೊಂಡ ಒಂದು ಸುತ್ತೋಲೆಯನ್ನು ವಿಶ್ವವಿದ್ಯಾಲಯವು ಎಲ್ಲಾ ಕಾಲೇಜುಗಳಿಗೆ ಕಳುಹಿಸುವಂತೆ ಕೋರಿದರು. ಸುತ್ತೋಲೆ ಕಳುಹಿಸುವುದಾಗಿ ಕುಲಸಚಿವರು ತಿಳಿಸಿದರು.

3) The marks cards of students enrolled in NEP for their 1st to 4th semester are not yet issued. They are in their 5th semester now. The principals earnestly wish to know the progress in this regard.

ಕುಲಸಚಿವ (ಮೌಲ್ಯಮಾಪನ)ರವರು ಮಾತನಾಡಿ ಒಂದರಿಂದ ನಾಲ್ಕನೇ ಸೆಮಿಸ್ಟರ್‌ನ ಅಂಕಪಟ್ಟಿಗಳ ಮುದ್ರಣದ ಕುರಿತು ಕರ್ನಾಟಕ ಸರ್ಕಾರದ ಆದೇಶಾನುಸಾರ ಅಂಕಪಟ್ಟಿಗಳನ್ನು ಮುದ್ರಿಸದೆ NAD ತಂತ್ರಾಂಶದಿಂದಲೇ ವಿದ್ಯಾರ್ಥಿಗಳು ಅಂಕಪಟ್ಟಿಗಳನ್ನು ಪಡೆದುಕೊಳ್ಳುವುದಾಗಿ ಸೂಚಿಸಿದ್ದ ಹಿನ್ನೆಲೆಯಲ್ಲಿ ಅಂಕಪಟ್ಟಿಗಳನ್ನು ಮುದ್ರಿಸಿಲ್ಲ. ನಂತರದಲ್ಲಿ, ಘನತೆವೆತ್ತ ಕುಲಾಧಿಪತಿಗಳ ಕಾರ್ಯಾಲಯದಿಂದ ಬಂದ ನಿರ್ದೇಶನದ ಪ್ರಕಾರ ಅಂಕಪಟ್ಟಿಗಳನ್ನು ಮುದ್ರಿಸಲು ಕ್ರಮ ಜರುಗಿಸಲಾಗಿದ್ದು, ಅಂಕಪಟ್ಟಿಗಳನ್ನು UUCMS ತಂತ್ರಾಂಶದ ಮೂಲಕ ಮುದ್ರಿಸಲು ಅನುವಾಗುವಂತೆ ಸಂಬಂಧಿಸಿದ ಅಧಿಕಾರಿಗಳೊಂದಿಗೆ ಚರ್ಚಿಸಿ ಟೆಂಪ್ಲೇಟ್‌ಗಳನ್ನು ಸಿದ್ಧಪಡಿಸಲಾಗುತ್ತಿದೆ. ಅದು ಅಂತಿಮಗೊಂಡ ನಂತರದಲ್ಲಿ ಶೀಘ್ರದಲ್ಲಿ ಅಂಕಪಟ್ಟಿಗಳನ್ನು ಮುದ್ರಿಸಿ ವಿದ್ಯಾರ್ಥಿಗಳಿಗೆ ವಿತರಿಸುವ ಕುರಿತು ಕ್ರಮ ಜರುಗಿಸಲಾಗುವುದು ಎಂದರು.

4) There is a discrepancy observed in allotting CGPA for students of Post graduation courses who received their results through UUCMS compared to earlier batches who received their grades in non UUCMS poprtal. The university is requested to resolve/ clarify this issue the earliest as it will create an impact on their Higher education/ job placement.

ಕುಲಸಚಿವ(ಮೌಲ್ಯಮಾಪನ)ರವರು ಮಾಹಿತಿ ನೀಡಿ ಮಾತನಾಡುತ್ತಾ, ಸ್ನಾತಕೋತ್ತರ ಕೋರ್ಸ್‌ಗಳ CGPA ನಲ್ಲಿನ ಗೊಂದಲಗಳ ಕುರಿತಾಗಿ UUCMS ನಲ್ಲಿನ ಮಾನದಂಡಗಳ

Scanned with OKEN Scanner

ಅನುಸಾರವಾಗಿ CGPA ಅಂಶಗಳನ್ನು CAPPING ಅನುಸಾರವಾಗಿ ನಿರ್ಧರಿಸಲಾಗುತ್ತಿದ್ದು, ಅದು ವಿಶ್ವವಿದ್ಯಾಲಯ ಪಾಲಿಸುತ್ತಿರುವ ಪರಿವರ್ತನ ಅಂಶ (conversion)ಕ್ಕೆ ವ್ಯತಿರಿಕ್ತವಾಗಿರುತ್ತದೆ. ಇದರ ಕುರಿತಾಗಿ ಈಗಾಗಲೇ ಸಂಬಂಧಿಸಿದ UUCMS ತಂತ್ರಜ್ಞರೊಂದಿಗೆ ಚರ್ಚಿಸಲಾಗಿದ್ದು ಹಾಗೂ ವಿಶ್ವವಿದ್ಯಾಲಯ ಪಾಲಿಸುತ್ತಿರುವ ಮಾನದಂಡಗಳ ದಾಖಲಾತಿಗಳನ್ನು ಸಲ್ಲಿಸಲಾಗಿರುತ್ತದೆ. UUCMS ತಂತ್ರಾಂಶದಲ್ಲಿ ತಿದ್ದುಪಡಿಗಳಾದ ನಂತರದಲ್ಲಿ ತಿದ್ದುಪಡಿಗೊಂಡ ಫಲಿತಾಂಶವನ್ನು (ಸರಿಯಾದ CGPA ನೊಂದಿಗೆ) ಪ್ರಕಟಿಸಿ ಅಂಕಪಟ್ಟಿಗಳನ್ನು ಮುದ್ರಿಸಲು ಕ್ರಮ ಜರುಗಿಸಲಾಗುವುದು ಎಂದರು.

3-ಸಿಂ-7.20(ಸಿ): **ಡಾ. ಕೆ. ಚಂದ್ರಶೇಖರ್**

1) ಕುವೆಂಪು ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗಗಳ ಬಡವರು ಮತ್ತು ಹಿಂದುಳಿದ ವರ್ಗಗಳಿಗೆ ಸೇರಿದ ಹಲವಾರು ವಿದ್ಯಾರ್ಥಿಗಳಿಗೆ ಕೆಲವೊಂದು ಪತ್ರಿಕೆಗಳಲ್ಲಿ ಶೇ 55% ಕ್ಕಿಂತ ಹೆಚ್ಚು ಅಂಕ ಬಂದಿದ್ದು, ಇತರೆ ಪತ್ರಿಕೆಗಳಲ್ಲಿ ಶೇ 55% ಕ್ಕಿಂತ ಕಡಿಮೆ ಅಂಕ ಪಡೆದಿರುತ್ತಾರೆ. ಕಡಿಮೆ ಅಂಕ ಪಡೆದ ವಿದ್ಯಾರ್ಥಿಗಳು ಮತ್ತು ಯಾವುದೇ ಪತ್ರಿಕೆಯ ವಿಷಯಗಳಲ್ಲಿ ಅಂಕ ಹೆಚ್ಚಿಗೆ ಮಾಡಿಕೊಳ್ಳಲು ಇಚ್ಚಿಸುವ ವಿದ್ಯಾರ್ಥಿಗಳಿಗೆ ಅವರು ಇಚ್ಚಿಸುವ ಪತ್ರಿಕೆಗಳನ್ನು ಮಾತ್ರ ಪುನ: ಪರೀಕ್ಷೆ ತೆಗೆದುಕೊಳ್ಳಲು ಇಂಪ್ರೂಮೆಂಟ್ ಪರೀಕ್ಷೆ (improvement exam) ಬರೆಯಲು ಅವಕಾಶ ಕಲ್ಪಿಸಲು ಸಿಂಡಿಕೇಟ್ ಸಭೆಯಲ್ಲಿ ನಿರ್ಣಯಕ್ಕಾಗಿ ಕೋರಲಾಗಿದೆ.

ಕುಲಸಚಿವ(ಮೌಲ್ಯಮಾಪನ)ರವರು ಮಾತನಾಡುತ್ತಾ, ವಿಶ್ವವಿದ್ಯಾಲಯದ ಪರಿನಿಯಮದ ಕಂಡಿಕೆ (06)ರ ಪ್ರಕಾರ Improvementಗೆ ಸ್ನಾತಕೋತ್ತರ ಪದವಿಯ ಎಲ್ಲಾ ಸೆಮಿಸ್ಟರ್‌ನ ಎಲ್ಲಾ ಪತ್ರಿಕೆಗಳಲ್ಲಿಯೂ ಉತ್ತೀರ್ಣರಾಗಿರಬೇಕು ಮತ್ತು Improvement ಪಡೆಯುವ ಆ ಸೆಮಿಸ್ಟರ್‌ನ ಎಲ್ಲಾ ಪತ್ರಿಕೆಗಳನ್ನು ತೆಗೆದುಕೊಳ್ಳಬೇಕಾಗುತ್ತದೆ (ಆಂತರಿಕ ಅಂಕಗಳನ್ನು ಹೊರತುಪಡಿಸಿ). ಆದ್ದರಿಂದ, ಪತ್ರಿಕೆವಾರು ಅಂಕ ಸುಧಾರಣೆಗೆ (Improvement) ನಿಯಮಾನುಸಾರ ಅವಕಾಶ ಇರುವುದಿಲ್ಲ. ಪ್ರಸ್ತುತ ನಿಯಮಾವಳಿಯಲ್ಲಿ ಸವಾಲಿನ ಮೌಲ್ಯಮಾಪನಕ್ಕೆ ಮಾತ್ರ ಫಲಿತಾಂಶ ಪ್ರಕಟವಾದ ನಂತರ ನಿರ್ದಿಷ್ಟ ದಿನಾಂಕದೊಳಗೆ ಶುಲ್ಕ ಪಾವತಿಸಿ ಪತ್ರಿಕೆವಾರು ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ ಎಂದರು. ಮಾನ್ಯ ಕುಲಪತಿಯವರು ಮಾತನಾಡಿ, ಸ್ನಾತಕೋತ್ತರ ಪದವಿಗೆ ಅದರದ್ದೇ ಆದ ಘನತೆ ಇರುತ್ತದೆ. ಕಡಿಮೆ ಅಂಕ ಪಡೆದುಕೊಂಡು ಪತ್ರಿಕೆವಾರು Improvement ತೆಗೆದುಕೊಳ್ಳಲು ಅನುಮತಿ ನೀಡಿದಲ್ಲಿ ವಿದ್ಯಾರ್ಥಿಯು ಪ್ರತಿ ಪರೀಕ್ಷೆಗೆ ಒಂದೊಂದೇ ಪತ್ರಿಕೆಯನ್ನು ಬರೆದು ಹೆಚ್ಚು ಅಂಕ ಪಡೆಯಲು ಪ್ರಯತ್ನಿಸಬಹುದು. ಅಲ್ಲದೆ ಪರಿನಿಯಮಗಳಲ್ಲಿ ಇದಕ್ಕೆ ಅವಕಾಶವಿಲ್ಲ ಎಂದರು.

ಚರ್ಚೆಯ ನಂತರ, ಸ್ನಾತಕೋತ್ತರ ಪದವಿಯಲ್ಲಿ ಪತ್ರಿಕೆವಾರು ಅಂಕ ಸುಧಾರಣೆಗೆ (Improvement) ಪರಿನಿಯಮದಲ್ಲಿ ಅವಕಾಶ ಇಲ್ಲದಿರುವುದರಿಂದ, ಅನುಮತಿ ನೀಡದಿರಲು ಸಭೆಯು ನಿರ್ಣಯಿಸಿತು.

2) 2021-22ನೇ ಸಾಲಿನಲ್ಲಿ ದೂರ ಶಿಕ್ಷಣದಲ್ಲಿ ಆನ್‌ಲೈನ್ (Online) ವಿದ್ಯಾರ್ಥಿಗಳಿಗೆ ಯಾವ ಪಠ್ಯಕ್ರಮವನ್ನು ಪರಿಚಯಿಸಲಾಗಿದೆ. ದಾಖಲೆ ಸಹಿತ ತಿಳಿಸುವುದು.

2020-21ನೇ ಸಾಲಿನ ಆನ್‌ಲೈನ್ ಪದವಿ ವಿದ್ಯಾರ್ಥಿಗಳಿಗೆ ದಿನಾಂಕ:10-10-2022ರಂದು ನಡೆದ ವಿಭಾಗಾಧ್ಯಕ್ಷರು ಮತ್ತು ಅಧ್ಯಯನ ಮಂಡಳಿ ಅಧ್ಯಕ್ಷರುಗಳ ಸಭೆಯಲ್ಲಿ ನಿರ್ಣಯಿಸಿದಂತೆ ದಿನಾಂಕ:28-10-2022ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆ ಪಡೆದುಕೊಂಡು ಓ.ಡಿ.ಎಲ್. ಮಾದರಿಯ ಪಠ್ಯಕ್ರಮವನ್ನು ಸೆಮಿಸ್ಟರ್ ಪದ್ಧತಿ ಹಂಚಿಕೆಯೊಂದಿಗೆ ಪರಿಚಯಿಸಲಾಗಿದೆ ಎಂಬ ಮಾಹಿತಿಯನ್ನು ಸದಸ್ಯರಿಗೆ ನೀಡಲಾಯಿತು.

3) ಕೋವಿಡ್-19ರ ಸಮಯದಲ್ಲಿ 1700 ವಿದ್ಯಾರ್ಥಿಗಳು ದೂರ ಶಿಕ್ಷಣ ಪ್ರವೇಶಾತಿಗೆ ಅರ್ಜಿ ಸಲ್ಲಿಸಿದ್ದು, ಈ ಬಗ್ಗೆ ನ್ಯಾಯಾಲಯದಿಂದಲೂ ಕೂಡ ಪ್ರವೇಶಾತಿ ಮಾಡಿಕೊಳ್ಳಲು ಸೂಚಿಸಿದ್ದರೂ ಸಹ ಇಲ್ಲಿಯವರೆಗೆ ಏಕೆ ಪ್ರವೇಶಾತಿ ಮಾಡಿಕೊಂಡಿಲ್ಲ ಎಂಬುದಕ್ಕೆ ದಾಖಲಾತಿ ಸಹಿತ ಕಾರಣಗಳನ್ನು ನೀಡುವುದು.

Scanned with OKEN Scanner

ಸಭೆಗೆ ಆಹ್ವಾನಿತರಾಗಿದ್ದ ದೂರಶಿಕ್ಷಣ ನಿರ್ದೇಶನಾಲಯದ ನಿರ್ದೇಶಕರಾದ ಪ್ರೊ.ಆರ್.ಹಿರೇಮಣಿನಾಯ್ಕರವರು ಮಾಹಿತಿ ನೀಡುತ್ತಾ, ನಿಗದಿತ ಸಮಯದಲ್ಲಿ ಪ್ರವೇಶಾತಿ ಪಡೆದು ಯು.ಜಿ.ಸಿ. ಪೋರ್ಟಲ್‌ಗೆ ಅಪ್‌ಲೋಡ್ ಮಾಡಲಾದ ಹಾಗೂ ಪ್ರವೇಶಾತಿ ಶುಲ್ಕ ಪಾವತಿಸಿರುವ ಎಲ್ಲಾ ವಿದ್ಯಾರ್ಥಿಗಳ ಪ್ರವೇಶಾತಿಯನ್ನು ಪರಿಗಣಿಸಲಾಗಿದೆ. ನ್ಯಾಯಾಲಯ ಸೂಚಿಸಿದ ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ಕಲಿಕಾರ್ಥಿ ಸೇವಾ ಕೇಂದ್ರದವರು ನಿಗದಿತ ಪ್ರವೇಶಾತಿಯ ದಿನಾಂಕದ ನಂತರ ಆಫ್‌ಲೈನ್ ಮೂಲಕ ಪ್ರವೇಶಾತಿ ಅರ್ಜಿಗಳನ್ನು ಪಡೆದಿದ್ದು, ಸದರಿ ಅರ್ಜಿಗಳನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸದೇ ಪ್ರವೇಶಾತಿ ಮಾಡಿಕೊಳ್ಳುವಂತೆ ಕೋರಿರುತ್ತಾರೆ. ಸದರಿ ವಿದ್ಯಾರ್ಥಿಗಳ ಮಾಹಿತಿಗಳನ್ನು ಯು.ಜಿ.ಸಿ. ಪೋರ್ಟಲ್‌ಗೆ ಅಪ್‌ಲೋಡ್ ಮಾಡಲು ಅವಕಾಶ ಇಲ್ಲದೇ ಇದ್ದುದರಿಂದ ಪರಿಗಣಿಸಲಾಗಿಲ್ಲ. ನ್ಯಾಯಾಲಯದ ಸೂಚನೆಯ ನಂತರ ಸದರಿ ವಿದ್ಯಾರ್ಥಿಗಳ ಪ್ರವೇಶಾತಿ ವಿವರಗಳನ್ನು ಯು.ಜಿ.ಸಿ. ಪೋರ್ಟಲ್‌ಗೆ ಅಪ್‌ಲೋಡ್ ಮಾಡುವ ಸಂಬಂಧ ಯು.ಜಿ.ಸಿ (ಡಿ.ಇ.ಬಿ), ನವದೆಹಲಿ ಇವರಿಗೆ ಈಗಾಗಲೇ ಅನುಮತಿಗಾಗಿ ಎರಡು ಪತ್ರಗಳನ್ನು ಬರೆಯಲಾಗಿದೆ. ಯು.ಜಿ.ಸಿ ಯಿಂದ ಅನುಮತಿ ಬಂದಲ್ಲಿ ಕ್ರಮ ಕೈಗೊಳ್ಳಲಾಗುವುದು ಎಂದರು. ಕುಲಸಚಿವರು ಮಾತನಾಡಿ ಈ ಪ್ರಕರಣದಲ್ಲಿ ಯು.ಜಿ.ಸಿ. ನಿರ್ದೇಶನಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ತಿಳಿಸಿದರು.

4) ವಿಶ್ವವಿದ್ಯಾನಿಲಯ ಆರ್ಥಿಕ ಸಂಕಷ್ಟದಲ್ಲಿದ್ದರು ಕೂಡ ಸ್ನಾತಕೋತ್ತರ ಪ್ರವೇಶಾತಿ ಅರ್ಜಿ ಶುಲ್ಕ 600 ರೂಗಳನ್ನು ಪ್ರಸ್ತುತ ವರ್ಷದಲ್ಲಿ 300 ರೂಗಳಿಗೆ ಕಡಿಮೆ ಮಾಡಿರುವುದಕ್ಕೆ ಕಾರಣವನ್ನು ತಿಳಿಸಿ. ಈ ಬಗ್ಗೆ ಹಿಂದೆ ಸಿಂಡಿಕೇಟ್ ಅನುಮೋದನೆ ಪಡೆದಿರುವುದಕ್ಕೆ ಮಾಹಿತಿ ನೀಡಿ.

ಮಾನ್ಯ ಕುಲಪತಿಯವರು ಮಾಹಿತಿ ನೀಡುತ್ತಾ, 2022-23ನೇ ಸಾಲಿನಲ್ಲಿ ಮೂರು ಸ್ನಾತಕೋತ್ತರ ವಿಭಾಗಗಳಿಗೆ ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳು ರೂ.600/-ಗಳ ಶುಲ್ಕ ಪಾವತಿಸುವಂತೆ ಪ್ರಕಟಣೆಯಲ್ಲಿ ತಿಳಿಸಲಾಗಿತ್ತು. ಆದರೆ UUCMS ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಮೂರು ವಿಭಾಗಕ್ಕೆ ಬದಲಾಗಿ ಪ್ರತಿ ವಿಭಾಗಕ್ಕೂ ಪ್ರತ್ಯೇಕವಾಗಿ ರೂ.600/-ಗಳನ್ನು ಪಾವತಿಸಬೇಕಾಗುತ್ತಿತ್ತು. ಇದು ವಿದ್ಯಾರ್ಥಿಗಳಿಗೆ ಹೆಚ್ಚಿನ ಹೊರೆಯಾಗುತ್ತಿದ್ದ ಕಾರಣ, ಬಹಳಷ್ಟು ವಿದ್ಯಾರ್ಥಿಗಳು ಒಂದಕ್ಕಿಂತ ಹೆಚ್ಚಿನ ವಿಭಾಗಗಳಿಗೆ ಅರ್ಜಿ ಸಲ್ಲಿಸಲಾಗಲಿಲ್ಲ. ಈ ಹಿನ್ನೆಲೆಯಲ್ಲಿ ದಿನಾಂಕ:22-09-2023 ಎಂದು ನಡೆದ ಡೀನರುಗಳು ಹಾಗೂ ಸ್ನಾತಕೋತ್ತರ ವಿಭಾಗಗಳ ಮುಖ್ಯಸ್ಥರುಗಳ ಸಭೆಯಲ್ಲಿ ಚರ್ಚಿಸಿ ನಿರ್ಣಯ ಕೈಗೊಂಡು, ಈ ಬಾರಿ ಪ್ರತಿ ವಿಭಾಗದ ಅರ್ಜಿ ಶುಲ್ಕವನ್ನು ರೂ.300/-ಗಳಿಗೆ ನಿಗದಿಪಡಿಸಲಾಯಿತು. ಇದರಿಂದಾಗಿ ವಿದ್ಯಾರ್ಥಿಗಳು ಹೆಚ್ಚಿನ ವಿಭಾಗಗಳಿಗೆ ಅರ್ಜಿ ಸಲ್ಲಿಸಲು ಸಾಧ್ಯವಾಯಿತು. ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲಕ್ಕೂ ತೊಂದರೆಯಾಗಲಿಲ್ಲ ಎಂದರು.

3-ಸಿಂ-7.20(ಡಿ): **ಶ್ರೀ ಶಶಿಧರ್, ಬಿ.ಎನ್.,**

1) ವಿಶ್ವವಿದ್ಯಾಲಯ ಪಿ.ಜಿ ಅಧ್ಯಾಪಕರನ್ನು ಸಂಯೋಜಿತ ಕಾಲೇಜುಗಳಿಗೆ ಹಾಗೂ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳನ್ನು ವಿಶ್ವವಿದ್ಯಾಲಯ ಪಿ.ಜಿ. ವಿಭಾಗಗಳಿಗೂ ವರ್ಗಾಹಿಸಿ ಶೈಕ್ಷಣಿಕ ಗುಣಮಟ್ಟ ಹೆಚ್ಚಿಸಲು ಅನುಕೂಲವಾಗುವಂತೆ ಮಾಡುವುದು. 3-ಸಿಂ-7.20(ಇ)

ಮಾನ್ಯ ಕುಲಪತಿಯವರು ಮಾತನಾಡುತ್ತಾ, ಸರ್ಕಾರದಿಂದ ಹುದ್ದೆಗಳು ಘಟಕ ಕಾಲೇಜುಗಳ ಸ್ನಾತಕ ವಿಷಯಗಳಿಗೆ ಮತ್ತು ವಿಶ್ವವಿದ್ಯಾಲಯದ ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ಪ್ರತ್ಯೇಕವಾಗಿ ಮಂಜೂರಾಗುತ್ತವೆ. ವಿಶ್ವವಿದ್ಯಾಲಯದ ಘಟಕ ಕಾಲೇಜುಗಳಲ್ಲಿ ಕೂಡ ಸ್ನಾತಕೋತ್ತರ ವಿಭಾಗಗಳಿದ್ದು, ಅಲ್ಲಿಗೆ ಅಧ್ಯಾಪಕ ಹುದ್ದೆ ಮಂಜೂರಾತಿಗಾಗಿ ಸರ್ಕಾರಕ್ಕೆ ಸಲ್ಲಿಸಿರುವ ಪರಿನಿಯಮಗಳಿಗೆ ಅನುಮೋದನೆ ಆಗಿಲ್ಲದಿರುವುದರಿಂದ ಪ್ರತ್ಯೇಕ ಹುದ್ದೆಗಳು ಸೃಜನೆ/ ಮಂಜೂರು ಆಗಿಲ್ಲ. ಅಲ್ಲದೇ, ಸಂಯೋಜಿತ ಕಾಲೇಜುಗಳ ಅಧ್ಯಾಪಕರುಗಳ ನೇಮಕಾತಿಯನ್ನು ಕಾಲೇಜು ಶಿಕ್ಷಣ ಇಲಾಖೆಯಿಂದ ನಿರ್ವಹಿಸಲಾಗುತ್ತದೆ. ಆದರೆ, ವಿಶ್ವವಿದ್ಯಾಲಯವು ನೇರವಾಗಿ ಉನ್ನತ ಶಿಕ್ಷಣ ಇಲಾಖೆಯ ಕಾರ್ಯದರ್ಶಿಯವರ ಮಾಹಿತಿ ... ಘಟಕ ಕಾಲೇಜುಗಳಿಗೆ ನೇಮಕಾತಿ ...

Scanned with OKEN Scanner

ಸ್ನಾತಕೋತ್ತರ ವಿಭಾಗಗಳಲ್ಲಿ ಬಳಸಿಕೊಳ್ಳಲಾಗುತ್ತಿದೆ. ಅಲ್ಲದೇ, ಸಹ್ಯಾದ್ರಿ ಕಾಲೇಜಿನ ಕೆಲವು ಅಧ್ಯಾಪಕರು ಸ್ನಾತಕೋತ್ತರ ಅಧ್ಯಯನ ವಿಭಾಗಗಳ ವಿದ್ಯಾರ್ಥಿಗಳಿಗೆ ಹಾಗೂ ಸ್ನಾತಕೋತ್ತರ ವಿಭಾಗಗಳ ಅಧ್ಯಾಪಕರು ಸಹ್ಯಾದ್ರಿ ಕಾಲೇಜಿನಲ್ಲಿರುವ ಸ್ನಾತಕೋತ್ತರ ವಿಭಾಗಗಳಲ್ಲಿನ ವಿದ್ಯಾರ್ಥಿಗಳಿಗೆ ವಿಶೇಷ ಉಪನ್ಯಾಸ ತರಗತಿಗಳನ್ನು ತೆಗೆದುಕೊಳ್ಳುತ್ತಾರೆ ಎಂದರು.

2) ಉಪಕುಲಸಚಿವರನ್ನು ವರ್ಗಾವಣೆ ಮಾಡುವುದರ ಕುರಿತು ಕೆಲವು ಅಧ್ಯಾಪಕರು ಕಡಿಮೆ ಅವಧಿಗೆ ಮತ್ತು ಕೆಲವರು ಹೆಚ್ಚಿನ ಅವಧಿಗೆ ಉಪಕುಲಸಚಿವರ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ ಎಂದರು.

ಕುಲಸಚಿವರು ಮಾತನಾಡಿ, ಆಡಳಿತದ ವ್ಯವಸ್ಥೆಯಲ್ಲಿ ಅವಧಿ ನಿಗದಿಪಡಿಸಲು ಆಗುವುದಿಲ್ಲ. ಸರ್ಕಾರದಲ್ಲಿ ಕೂಡ ಅಧಿಕಾರಿಗಳಿಗೆ ಅವಧಿ ನಿಗದಿಪಡಿಸುವುದಿಲ್ಲ. ಮುಂದಿನ ದಿನಗಳಲ್ಲಿ ಇದರ ಕುರಿತಾಗಿ ಪರಿಶೀಲಿಸಲಾಗುವುದು ಎಂದರು.

3) 371(ಜೆ) ಮೀಸಲಾತಿ ಅಡಿಯಲ್ಲಿ ನೇಮಕಗೊಂಡಿರುವ ನೌಕರರಿಗೆ ಶೇ 8% ಮೀಸಲಿರುವ ಹುದ್ದೆಗಳಿಗೆ ನೀಡಲಾಗಿರುವ ಮುಂಬಡ್ತಿಯನ್ನು ಹಿಂಪಡೆದಿರುವ ಕುರಿತು.

ಕುಲಸಚಿವರು ಮಾಹಿತಿ ನೀಡಿ, ಈ ಹಿಂದೆ ವಿಶ್ವವಿದ್ಯಾಲಯದಲ್ಲಿ ಸರ್ಕಾರದ ಅನುಮೋದನೆ ಪಡೆಯದೇ ವಿವಿಧ ಅಧ್ಯಾಪಕೇತರ ಹುದ್ದೆಗಳನ್ನು ಉನ್ನತೀಕರಿಸಿ ಬಡ್ತಿ ನೀಡಿದ್ದು, ಇದರಿಂದಾಗಿ ನೌಕರರ ವೇತನಕ್ಕೆ ತೊಂದರೆಯಾಗುತ್ತಿತ್ತು. ಈ ಹಿನ್ನೆಲೆಯಲ್ಲಿ ಉನ್ನತೀಕರಿಸಲಾದ ಹುದ್ದೆಗಳಿಗೆ ನೀಡಿದ್ದ ಬಡ್ತಿಗಳನ್ನು ಹಿಂಪಡೆಯಲಾಗಿದೆ. ಬಡ್ತಿ ಹಿಂಪಡೆದ ಕಾರಣದಿಂದಾಗಿ ಪ್ರಸ್ತುತ ದಿನಾಂಕ:31–03–2017ಕ್ಕೆ ಇದ್ದಂತೆ ಜಾರಿಯಲ್ಲಿರುವ ಜೇಷ್ಠತಾ ಪಟ್ಟಿಯಲ್ಲಿ ಹುದ್ದೆಗಳ ಸಂಖ್ಯೆಯಲ್ಲಿ ವ್ಯತ್ಯಾಸವಾಗಿರುವುದರಿಂದ ನೌಕರರ ಜೇಷ್ಠತಾ ಪಟ್ಟಿಯನ್ನು ಪರಿಷ್ಕರಿಸಿ ಸರಿಪಡಿಸಬೇಕಾಗಿದೆ. ಅಲ್ಲದೇ ನಿಯಮಾನುಸಾರ ಪ್ರತಿ ವರ್ಷ ಜೇಷ್ಠತಾಪಟ್ಟಿಯನ್ನು ಜನವರಿ 01ಕ್ಕೆ ಇದ್ದಂತೆ ಪರಿಷ್ಕರಿಸಬೇಕು. ಆದರೆ 31–03–2017ರ ನಂತರ ವಿಶ್ವವಿದ್ಯಾಲಯವು ಜೇಷ್ಠತಾಪಟ್ಟಿಯನ್ನು ಪರಿಷ್ಕರಿಸಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಈಗಾಗಲೇ 2023ನೇ ಇಸವಿಯು ಮುಗಿಯುತ್ತಾ ಬಂದಿರುವುದರಿಂದ, ಜೇಷ್ಠತಾ ಪಟ್ಟಿ ಪರಿಷ್ಕರಣೆಗೆ ರಚಿಸಲಾದ ವರದಿಯಂತೆ ದಿನಾಂಕ:01–01–2024ಕ್ಕೆ ಅಧ್ಯಾಪಕೇತರ ನೌಕರರ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು. ಇದಕ್ಕೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಸೂಕ್ತ ದಾಖಲೆಗಳೊಂದಿಗೆ ಸಲ್ಲಿಸಲು ಕಾಲಾವಕಾಶ ನೀಡಲಾಗುವುದು. ನಂತರ ನೌಕರರು ಸಲ್ಲಿಸುವ ಆಕ್ಷೇಪಣೆಗಳನ್ನು ಸಮಿತಿಯು ಪರಿಶೀಲಿಸಿ ಅಂತಿಮ ಜೇಷ್ಠತಾ ಪಟ್ಟಿಯನ್ನು ಸಲ್ಲಿಸುತ್ತದೆ. ಸದರಿ ಜೇಷ್ಠತಾ ಪಟ್ಟಿಯನ್ನು ಆಧಾರವಾಗಿಟ್ಟುಕೊಂಡು ಮಂಜೂರಾದ ಹುದ್ದೆಗಳಿಗೆ ಅರ್ಹತೆ, ಜೇಷ್ಠತೆ ಹಾಗೂ ರೋಸ್ಟರ್ ಆಧಾರದಲ್ಲಿ ಆದಷ್ಟು ಶೀಘ್ರದಲ್ಲಿ ಮುಂಬಡ್ತಿಗಳನ್ನು ನೀಡಲಾಗುವುದು ಎಂದರು.

**ο–7.20(ಇ): ಡಾ. ಎಂ. ಸ್ವಾಮಿ**

1) The status of unsigned Minutes of the Syndicate Meeting held during the tenure of Prof. Kannan, Registrar of the University, (22-09-2023 Meeting).

ದಿನಾಂಕ:22–09–2023ರ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಯನ್ನು ಈಗಾಗಲೇ ವಿಶ್ವವಿದ್ಯಾಲಯದ ಜಾಲತಾಣದಲ್ಲಿ ಪ್ರಕಟಿಸಲಾಗಿದೆ. ಸದರಿ ಸಿಂಡಿಕೇಟ್ ಸಾಮಾನ್ಯ ಸಭೆ ನಡೆದ ಸಂದರ್ಭದಲ್ಲಿ ಪ್ರೊ. ಕಣ್ಣನ್ ಪಿ. ಇವರು ಕುಲಸಚಿವರಾಗಿ ಕಾರ್ಯನಿರ್ವಹಿಸಿರುವುದಿಲ್ಲ ಎಂಬ ಮಾಹಿತಿಯನ್ನು ನೀಡಲಾಯಿತು.

2) Reasons for assigning Dr. A Shanmukha as the member of PG Admission committee of Political Science, as it was resolved in the previous meeting not to assign any important posts/positions as member, Chairman etc.. to him as the matter is in the High court of Karnataka about his fake caste certificate.

3) Request to present statement of Objections filed by the Legal Cell of the University against the writ petition of Dr. A. Shanmukha, Professor of Political Science, Kuvempu University.

Scanned with OKEN Scanner

statement of Objections ನ ಪ್ರತಿಯನ್ನು ಸದಸ್ಯರಿಗೆ ಒದಗಿಸಲಾಯಿತು.

4) Request reasons for transferring Sri Suresh, Deputy Registras from HRM to other posts, as it was resolved in the Syndicate meeting that a minimum period for transfer is 03 years and there are some Deputy Registrars still continue in their respective posts even after completing 3 years.

ಇದರ ಕುರಿತಾಗಿ ವಿಷಯ ಸಂಖ್ಯೆ: 2023–ಸಿಂ–7.20(ಡಿ)(2)ರಲ್ಲಿ ಮಾನ್ಯ ಸದಸ್ಯರಾದ ಶ್ರೀ ಬಿ.ಎನ್.ಶಶಿಧರ್‌ರವರಿಗೆ ಮಾಹಿತಿ ನೀಡಿರುವುದನ್ನು ಗಮನಕ್ಕೆ ತರಲಾಯಿತು.

**23–ಸಿಂ–7.20(ಎಫ್): ಶ್ರೀ ಶಾಂತಕುಮಾರ್ ಜಿ.ಎಸ್.**

1) ಸಹ್ಯಾದ್ರಿ ಉತ್ಸವವನ್ನು ವಿಶ್ವವಿದ್ಯಾಲಯದಲ್ಲಿ ಕಳೆದ ಮೂರು ವರ್ಷಗಳಿಂದ ನಡೆಸುತ್ತಿಲ್ಲ. ಪ್ರಸ್ತುತ ವರ್ಷದಿಂದ ನಡೆಸಲು ಕ್ರಮಕೈಗೊಳ್ಳುವ ಕುರಿತು

ಮಾನ್ಯ ಕುಲಪತಿಯವರು ಮಾತನಾಡಿ, ಕೋವಿಡ್–19ರ ಹಿನ್ನೆಲೆಯಲ್ಲಿ ಸಹ್ಯಾದ್ರಿ ಉತ್ಸವ ಕಾರ್ಯಕ್ರಮವನ್ನು ನಡೆಸಿರಲಿಲ್ಲ. ಈ ಶೈಕ್ಷಣಿಕ ವರ್ಷದಲ್ಲಿ ನಡೆಸಲಾಗುವುದು ಎಂದರು.

2) ಪಿಜಿ/ಯುಜಿ ಕೋರ್ಸ್‌ಗಳಿಗೆ ಡಿಜಿಟಲ್ ವ್ಯಾಲೂವೇಷನ್ ವಿಶ್ವವಿದ್ಯಾಲಯದಲ್ಲಿ ಅಳವಡಿಸುವ ಕುರಿತು.

ಕುಲಸಚಿವ (ಮೌಲ್ಯಮಾಪನ)ರವರು ಮಾತನಾಡುತ್ತಾ ಸ್ನಾತಕ/ಸ್ನಾತಕೋತ್ತರ ಕೋರ್ಸ್‌ಗಳಿಗೆ ಡಿಜಿಟಲ್ ಮೌಲ್ಯಮಾಪನವನ್ನು ವಿಶ್ವವಿದ್ಯಾಲಯದಲ್ಲಿ ಅಳವಡಿಸುವ ಸಲುವಾಗಿ ಈ ಹಿಂದೆ ಇ–ಟೆಂಡರನ್ನು ಆಹ್ವಾನಿಸಲಾಗಿತ್ತು. ಆಡಳಿತಾತ್ಮಕ ಕಾರಣಗಳಿಂದ ಸದರಿ ಟೆಂಡರನ್ನು ರದ್ದುಪಡಿಸಲಾಗಿದೆ. ಈಗ ಇನ್ನೂ ಉನ್ನತ ಮಟ್ಟದ ತಾಂತ್ರಿಕತೆ ಬಂದಿದ್ದು, ಹೊಸದಾಗಿ ಈ ಕುರಿತು ಟೆಂಡರ್ ಆಹ್ವಾನಿಸಲು ಪ್ರಕ್ರಿಯೆ ಕೈಗೊಳ್ಳಲಾಗುತ್ತಿದೆ ಎಂದರು. ಶ್ರೀ.ಶಾಂತಕುಮಾರ್‌ರವರು ಮಾತನಾಡಿ, ಈಗಾಗಲೇ ರಾಜ್ಯದ ವಿ.ಟಿ.ಯು., ಬೆಂಗಳೂರು, ಮೈಸೂರು, ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ ಸೇರಿದಂತೆ ಕೆಲವು ವಿಶ್ವವಿದ್ಯಾಲಯಗಳಲ್ಲಿ ಅಳವಡಿಸಲಾಗಿದೆ. ಇದರಿಂದ ಹಣ ಹಾಗೂ ಸಮಯದ ಉಳಿತಾಯವಾಗುತ್ತದೆ. ವಿದ್ಯಾರ್ಥಿಗಳಿಗೆ ಬೇಗನೆ ಫಲಿತಾಂಶ ನೀಡಲು ಅನುಕೂಲವಾಗುತ್ತದೆ ಎಂದರು. ಕುಲಸಚಿವರು ಮಾತನಾಡಿ, Advanced Technology ಒಳಗೊಂಡಿರುವ Revisied Specification ನ್ನು ಒಳಗೊಂಡಂತೆ ಹೊಸ ಟೆಂಡರ್ ಮಾಡಿ, ಪ್ರಾಯೋಗಿಕವಾಗಿ ಯಾವುದಾದರೊಂದು ವಿಷಯವನ್ನು ಆಯ್ಕೆ ಮಾಡಿ Pilot Project ಆಗಿ ಆರಂಭಿಸಿ, ಅದರ ಸಾಧಕ ಬಾದಕಗಳನ್ನು ನೋಡಿಕೊಂಡು ಉಳಿದ ವಿಷಯಗಳಿಗೆ ವಿಸ್ತರಿಸಬಹುದು ಎಂದರು. ಕುಲಸಚಿವರ ಸಲಹೆಯನ್ನು ಒಪ್ಪಿದ ಸಭೆಯು ಇದರ ಕುರಿತಾಗಿ ಶೀಘ್ರ ಕಾರ್ಯಪ್ರವೃತ್ತರಾಗುವಂತೆ ಕುಲಸಚಿವ (ಮೌಲ್ಯಮಾಪನ)ರವರಿಗೆ ಸೂಚಿಸಿತು.

3) ದಿನಾಂಕ:27–07–2023 ರಂದು ನಡೆದ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಇದುವರೆವಿಗೂ ಜಾರಿಗೊಳಿಸದಿರುವ ಕುರಿತು ಮಾಹಿತಿ.

ಕುಲಸಚಿವರು ಮಾತನಾಡಿ, ದಿನಾಂಕ:27–07–2023ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಯನ್ನು ಅಂದಿನ ಕುಲಸಚಿವರಾಗಿದ್ದ ಪ್ರೊ. ಕಣ್ಣನ್ ಪಿ., ಸ್ನಾತಕೋತ್ತರ ಇಂಗ್ಲೀಷ್ ವಿಭಾಗ, ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ ಇವರಿಗೆ ದಿನಾಂಕ:07–10–2023 ರಂದು ಸಹಿಗಾಗಿ ನೋಂದಣಿ ಅಂಚೆ ಮೂಲಕ ಕಳುಹಿಸಲಾಗಿತ್ತು ಹಾಗೂ ದಿನಾಂಕ:26–10–2023ರಂದು ಸದರಿಯವರಿಗೆ ಶೀಘ್ರ ಸಹಿಮಾಡಿ ಕಳುಹಿಸುವಂತೆ ನೆನಪೋಲೆಯನ್ನು ಕೂಡ ಬರೆಯಲಾಗಿದೆ. ನಂತರ ಪ್ರೊ. ಪಿ.ಕಣ್ಣನ್‌ರವರು ತಮ್ಮ ದಿನಾಂಕ:04–11–2023ರ ಪತ್ರದಲ್ಲಿನ ಕೋರಿಕೆಯಂತೆ ದಿನಾಂಕ

Scanned with OKEN Scanner

27–07–2023ರ ಸಿಂಡಿಕೇಟ್ ಸಾಮಾನ್ಯ ಸಭೆಯ ಕಾರ್ಯಸೂಚಿಯ ಪ್ರತಿಗಳನ್ನು ಕೂಡ ನೋಂದಣಿ ಅಂಚೆ ಮೂಲಕ ಕಳುಹಿಸಿಕೊಡಲಾಗಿದೆ. ಆದಾಗ್ಯೂ, ಈವರೆಗೂ ಅವರು ನಡಾವಳಿಯನ್ನು ಕಳುಹಿಸಿಲ್ಲ. ಆದುದರಿಂದ ಈ ಸಭೆಯಲ್ಲಿಯೇ ಸದರಿ ನಡಾವಳಿಗಳಿಗೆ ಅನುಮೋದನೆ ನೀಡಬಹುದು ಎಂದರು. ಡಾ.ಪದ್ಮೇಗೌಡರವರು ಮಾತನಾಡಿ, ಸದರಿ ಸಭೆಯಲ್ಲಿ ಕೈಗೊಂಡ ಶೈಕ್ಷಣಿಕ, ಸಂಶೋಧನೆ ಹಾಗೂ ಆಡಳಿತಕ್ಕೆ ಸಂಬಂಧಪಟ್ಟ ಹಲವಾರು ನಿರ್ಣಯಗಳು ಕಾರ್ಯರೂಪಕ್ಕೆ ಬರದೇ ತೊಂದರೆಯಾಗುತ್ತಿದೆ. ಆದುದರಿಂದ, ಸದರಿ ನಡಾವಳಿಗಳನ್ನು ಈ ಸಭೆಯಲ್ಲಿಯೇ ಅನುಮೋದಿಸಬಹುದು ಎನ್ನುವ ಕುಲಸಚಿವರ ಕ್ರಮ ಸಮಂಜಸವಾದುದು ಎಂದರು. ಈ ಹಿನ್ನೆಲೆಯಲ್ಲಿ ದಿನಾಂಕ:27–07–2023 ರಂದು ನಡೆದ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಎಲ್ಲ ಸದಸ್ಯರಿಗೆ ಒದಗಿಸಲಾಯಿತು. ಮಾನ್ಯ ಕುಲಪತಿಯವರು ನಡಾವಳಿಯ ಪ್ರತಿಯೊಂದು ವಿಷಯವನ್ನೂ ಓದಿ ಸಭೆಯಲ್ಲಿ ಪ್ರಸ್ತುತಪಡಿಸಿದರು. ಹಾಗೂ ವಿಷಯ ಸಂಖ್ಯೆ:2023–ಸಿಂ–5.05ನಲ್ಲಿನ ಘಟಕ ಕಾಲೇಜುಗಳ 17 ಪ್ರಾಧ್ಯಾಪಕರ ಸ್ಥಾನೀಕರಣದ ದಿನಾಂಕ ಪರಿಷ್ಕರಣೆ ಕುರಿತು ಮತ್ತೊಮ್ಮೆ ಪರಿಶೀಲಿಸುವ ಅಗತ್ಯ ಇದೆ ಎಂದರು. ಡಾ.ಸಂಧ್ಯಾ ಕಾವೇರಿಯವರು ಮಾತನಾಡಿ, ಈ ವಿಷಯವು ದಿನಾಂಕ:16–06--2023ರಂದು ನಡೆದ ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ನೇರವಾಗಿ ಸಲ್ಲಿಸಲ್ಪಟ್ಟಿತ್ತು. ಆದರೆ, ಸಭೆಯಲ್ಲಿ ಯು.ಜಿ.ಸಿ., ಮತ್ತು ಸರ್ಕಾರದ ನಿಯಮಗಳು ಹಾಗೂ ವಿಶ್ವವಿದ್ಯಾಲಯದ ಪರಿನಿಯಮ ಮುಂತಾದುವುಗಳನ್ನು ಪರಿಶೀಲಿಸಿ, ಇನ್ನೊಮ್ಮೆ ಬಿ.ಓ.ಎ., ಸಭೆಯಲ್ಲಿ ಮಂಡಿಸಿ, ಬಿ.ಓ.ಎ. ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸಬೇಕೆಂದು ನಿರ್ಣಯಿಸಲಾಗಿತ್ತು. ಈ ಹಿನ್ನೆಲೆಯಲ್ಲಿ, ದಿನಾಂಕ:04–07–2023 ಮತ್ತು 13–07–2023ರಂದು ನಡೆದ ಬಿ.ಓ.ಎ. ಸಭೆಗಳು ದಿನಾಂಕ ಪರಿಷ್ಕರಣೆಗೆ ಶಿಫಾರಸ್ಸು ಮಾಡಿರುವುದರಿಂದ ಅನುಮೋದಿಸಬಹುದು ಎಂದರು. ಕುಲಸಚಿವರು ಮಾತನಾಡಿ, ಈಗ ಕುಲಪತಿಗಳು ಹಾಗೂ ಕುಲಸಚಿವರು ಬದಲಾಗಿರುವುದರಿಂದ ನಿಯಮಗಳು ಹಾಗೂ ನಡಾವಳಿಗಳನ್ನು ಮತ್ತೊಮ್ಮೆ ಪರಿಶೀಲಿಸುವ ಅಗತ್ಯ ಇದೆ ಎಂದರು.

ಸುಧೀರ್ಘ ಚರ್ಚೆಯ ನಂತರ, ವಿಷಯ ಸಂಖ್ಯೆ:2023–ಸಿಂ–5.05ರಲ್ಲಿನ ಘಟಕ ಕಾಲೇಜುಗಳ ಪ್ರಾಧ್ಯಾಪಕರ ಸ್ಥಾನೀಕರಣದ ದಿನಾಂಕ ಪರಿಷ್ಕರಣೆಗಾಗಿ ನಡೆದ ದಿನಾಂಕ: 04–07–2023 ಮತ್ತು 13–07–2023ರ ಬಿ.ಓ.ಎ. ಸಭೆಯ ಶಿಫಾರಸ್ಸುಗಳನ್ನು ಹೊರತುಪಡಿಸಿ, ಉಳಿದ ಬಿ.ಓ.ಎ. ಸಭೆಯ ಶಿಫಾರಸ್ಸುಗಳನ್ನು ಅನುಮೋದಿಸಿ ಉಳಿದಂತೆ ದಿನಾಂಕ:27-07--2023 ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳನ್ನು ಸಭೆಯು ಯಥಾವತ್ತಾಗಿ ಅನುಮೋದಿಸಿತು.

**2023–ಸಿಂ–7.21: ಸರ್ಕಾರದಿಂದ ಬಂದ ಪತ್ರಗಳು/ ರಹಸ್ಯ ವರದಿಗಳ ಮಂಡನೆ**

**ಯಾವುದೂ ಇಲ್ಲ**

**2023–ಸಿಂ–7.22: ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ವಿಷಯಗಳು**

23–ಸಿಂ–7.22(ಎ): **ಶ್ರೀ ಬಿ.ಎನ್.ಶಶಿಧರ:** ದೂರಶಿಕ್ಷಣ ನಿರ್ದೇಶನಾಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಆರ್.ಟಿ.ಎ., ಸಿಬ್ಬಂದಿಗಳಿಗೆ ಮುಂದುವರಿಕೆ ಆದೇಶ ನೀಡಿಲ್ಲ. ಇದರಿಂದಾಗಿ ಅವರಿಗೆ ವೇತನ ಕೂಡ ಆಗದೇ ಜೀವನ ನಿರ್ವಹಣೆ ಕಷ್ಟವಾಗಿದೆ. ಆದುದರಿಂದ, ಮಾನವೀಯ ನೆಲೆಯಲ್ಲಿ ಪರಿಗಣಿಸಿ ಮುಂದುವರಿಕೆ ಆದೇಶ ನೀಡುವಂತೆ ಕೋರಿದರು.

ಕುಲಸಚಿವರು ಮಾತನಾಡಿ, ಕರ್ನಾಟಕ ಸರ್ಕಾರವು ಸಾಂಪ್ರದಾಯಿಕ ವಿಶ್ವವಿದ್ಯಾಲಯಗಳಲ್ಲಿ ದೂರ ಶಿಕ್ಷಣ ಕೋರ್ಸ್‌ಗಳನ್ನು ಸ್ಥಗಿತಗೊಳಿಸಿದೆ. ಈಗ ಹೊಸ ಪದ್ಧತಿಯಲ್ಲಿ ಎಲ್.ಎಂ.ಎಸ್. ಮೂಲಕ ಕೋರ್ಸ್‌ಗಳನ್ನು ನಡೆಸಲಾಗುತ್ತಿದ್ದು, ಇದರಲ್ಲಿ ವಿಶ್ವವಿದ್ಯಾಲಯದ ಸಿಬ್ಬಂದಿಗಳ ಪಾತ್ರ ಕಡಿಮೆ ಇದೆ. ಆದುದರಿಂದ ಆರ್.ಟಿ.ಎ., ಸಿಬ್ಬಂದಿಗಳಿಗೆ ಕೆಲಸವಿಲ್ಲವಾದ್ದರಿಂದ ಅವರನ್ನು ಮುಂದುವರಿಸಲು ಅವಕಾಶವಿಲ್ಲ. ಈ ಹಿನ್ನೆಲೆಯಲ್ಲಿ ಅವರಿಗೆ ಅತಿಥಿ ಉಪನ್ಯಾಸಕರ ಹುದ್ದೆಗೆ ಅರ್ಜಿ ಸಲ್ಲಿಸುವಂತೆ ತಿಳಿಸಲಾಗಿದ್ದು, ಅವರು ಅರ್ಜಿ ಸಲ್ಲಿಸಿದ್ದಲ್ಲಿ ಅವರಿಗೆ ಪ್ರಾಶಸ್ತ್ಯ ನೀಡಲಾಗುವುದು ಎಂದರು. ಮಾನ್ಯ ಕುಲಪತಿಯವರು ಮಾತನಾಡಿ, ಅವರು ಆರ್.ಟಿ.ಎ. ಆಗಿ ಸಲ್ಲಿಸಿರುವ



Scanned with OKEN Scanner

2023–ಸಿಂ–7.22(ಬಿ): **ಡಾ.ಎ.ಟಿ.ಪದ್ಮೇಗೌಡ:** ವಿಶ್ವವಿದ್ಯಾಲಯದ ಸಂಯೋಜನಾ ಸಮಿತಿಯಲ್ಲಿ ಹಿರಿಯ ಪ್ರಾಂಶುಪಾಲರುಗಳು ಹಾಗೂ ಸಿಂಡಿಕೇಟ್ ಸದಸ್ಯರುಗಳು ಇರುತ್ತಾರೆ. ಅದೇ ರೀತಿ ನಮ್ಮಲ್ಲಿಯೂ ಅವಕಾಶ ಮಾಡಿಕೊಡಬೇಕು ಎಂದರು. ಸದಸ್ಯರಾದ ಶ್ರೀ ಬಿ.ಎನ್.ಶಶಿಧರರವರು ಮಾತನಾಡಿ ಬೇರೆ ವಿಶ್ವವಿದ್ಯಾಲಯಗಳಲ್ಲಿ ಸಿಂಡಿಕೇಟ್ ಹಾಗೂ ವಿದ್ಯಾವಿಷಯಕ ಪರಿಷತ್ತಿನ ಸದಸ್ಯರು ಕೂಡಾ ಸಂಯೋಜನಾ ಸಮಿತಿಯ ಸದಸ್ಯರಾಗಿದ್ದಾರೆ, ಕೆಲವು ವಿಶ್ವವಿದ್ಯಾಲಯಗಳಲ್ಲಿ ಸಿಂಡಿಕೇಟ್ ಸದಸ್ಯರೇ ಸಂಯೋಜನಾ ಸಮಿತಿಯ ಅಧ್ಯಕ್ಷರಾಗಿದ್ದಾರೆ. ನಮ್ಮ ವಿಶ್ವವಿದ್ಯಾಲಯಲ್ಲಿಯೂ ಪರಿಗಣಿಸಬೇಕು ಎಂದರು. ಮಾನ್ಯ ಕುಲಪತಿಯವರು ಮಾತನಾಡಿ, ಸಿಂಡಿಕೇಟ್ ಸದಸ್ಯರನ್ನು ಸಂಯೋಜನಾ ಸಮಿತಿಗೆ ನೇಮಕ ಮಾಡಬಾರದು ಎಂದು ಈ ಹಿಂದೆಯೇ ಸರ್ಕಾರದಿಂದ ಪತ್ರ ಬಂದಿರುವುದಾಗಿ ತಿಳಿಸಿದರು. ಶ್ರೀ ಬಿ.ಎನ್.ಶಶಿಧರರವರು ಮುಂದುವರೆದು ಮಾತನಾಡುತ್ತಾ ಸದರಿ ಸರ್ಕಾರದ ಪತ್ರಕ್ಕೆ ನ್ಯಾಯಾಲಯದಲ್ಲಿ ತಡೆಯಾಜ್ಞೆ ಇರುವುದರಿಂದ ಬೇರೆ ವಿಶ್ವವಿದ್ಯಾಲಯಗಳಲ್ಲಿ ಸಂಯೋಜನಾ ಸಮಿತಿಗೆ ಸಿಂಡಿಕೇಟ್ ಸದಸ್ಯರನ್ನು ನೇಮಕ ಮಾಡುತ್ತಿರುವುದಾಗಿ ತಿಳಿಸಿದರು.

ಕುಲಸಚಿವರು ಮಾತನಾಡುತ್ತಾ, ಪ್ರಕರಣವು ನ್ಯಾಯಾಲಯದಲ್ಲಿ ಇದ್ದಲ್ಲಿ, ಈ ಕುರಿತು ಪರಿಶೀಲಿಸಿ ಸರ್ಕಾರದ ಮಾರ್ಗದರ್ಶನ ಪಡೆಯುವುದಾಗಿ ಸಭೆಗೆ ತಿಳಿಸಿದರು.

2023–ಸಿಂ–7.22(ಸಿ): **ಡಾ.ಸಂಧ್ಯಾಕಾವೇರಿ, ಕೆ.:** ಹೊಸ ಕಾಲೇಜು ಹಾಗೂ ಹೊಸ ಕೋರ್ಸ್‌ಗಳ ಸಂಯೋಜನಾ ಶುಲ್ಕ ಬೇರೆ ವಿಶ್ವವಿದ್ಯಾಲಯಗಳಿಗೆ ಹೋಲಿಸಿದಲ್ಲಿ ನಮ್ಮಲ್ಲಿ ತುಂಬಾ ಜಾಸ್ತಿ ಇದೆ. ನಮ್ಮಲ್ಲಿ ಕಾಲೇಜುಗಳ ಸಂಖ್ಯೆ ಕೂಡ ಕಡಿಮೆ ಇದ್ದು, ಹೆಚ್ಚಿನ ಸಂಯೋಜನಾ ಶುಲ್ಕದಿಂದಾಗಿ ಹೊಸ ಕಾಲೇಜು/ಕೋರ್ಸ್‌ಗಳನ್ನು ಆರಂಭಿಸುವುದು ಕಷ್ಟವಾಗುತ್ತಿದೆ. ಇನ್ನೊಮ್ಮೆ ಪರಿಶೀಲಿಸಿ ಶುಲ್ಕಗಳನ್ನು ಕಡಿಮೆ ಮಾಡಿದಲ್ಲಿ ಖಾಸಗೀ ಕಾಲೇಜುಗಳಿಗೆ ಅನುಕೂಲವಾಗುತ್ತದೆ ಎಂದರು. ಈ ಬಗ್ಗೆ ಪರಿಶೀಲಿಸಿ ಅಗತ್ಯ ಕ್ರಮ ವಹಿಸುವುದಾಗಿ ಕುಲಸಚಿವರು ಸಭೆಗೆ ತಿಳಿಸಿದರು.

2023–ಸಿಂ–7.22(ಡಿ): **ಡಾ.ವಿಷ್ಣುಮೂರ್ತಿ, ಕೆ.ಎ.,:** ಕರ್ನಾಟಕ ಸರ್ಕಾರವು ಕೆಲವು ಸರ್ಕಾರಿ ಕಾಲೇಜುಗಳಲ್ಲಿ ಬಿ.ಸಿ.ಎ., ಕೋರ್ಸ್‌ಗಳನ್ನು ಆರಂಭಿಸಲು ಅನುಮತಿ ನೀಡಿದೆ. ಆದರೆ, ವಿಶ್ವವಿದ್ಯಾಲಯದಿಂದ ಸಂಯೋಜನೆ ನೀಡಿಲ್ಲ. ರಾಜ್ಯದ ಕೆಲವು ವಿಶ್ವವಿದ್ಯಾಲಯಗಳಲ್ಲಿ ಆಫ್‌ಲೈನ್ ಮೂಲಕ ಸಂಯೋಜನಾ ಕಾರ್ಯ ಮುಗಿಸಿದ್ದಾರೆ. ನಮ್ಮಲ್ಲಿಯೂ ಹೀಗೆ ಮಾಡಿದಲ್ಲಿ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ. ಇಲ್ಲವಾದಲ್ಲಿ ತೊಂದರೆಯಾಗುತ್ತದೆ ಎಂದರು.

ಕುಲಸಚಿವರು ಮಾತನಾಡುತ್ತಾ, ಈ ಕುರಿತಾಗಿ ಈಗಾಗಲೇ ಸರ್ಕಾರಕ್ಕೆ ಪತ್ರಗಳನ್ನು ಬರೆಯಲಾಗಿದೆ. ಆದರೆ, ಇನ್ನೂ ಯು.ಯು.ಸಿ.ಎಂ.ಎಸ್. ಪೋರ್ಟ್‌ಲ್ ಓಪನ್ ಆಗಿಲ್ಲ. ಪೋರ್ಟಲ್ ಓಪನ್ ಮಾಡಿಸಿ, ಸಂಯೋಜನೆಗೆ ಕ್ರಮ ಕೈಗೊಳ್ಳಲಾಗುವುದು ಎಂದರು.

2023–ಸಿಂ–7.22(ಇ): **ಡಾ. ಸಂಧ್ಯಾಕಾವೇರಿ:** ಪ್ರಸ್ತುತ ವಿಶ್ವವಿದ್ಯಾಲಯದ ವ್ಯಾಪ್ತಿಯ ಐದು ಕಾಲೇಜುಗಳಲ್ಲಿ ಬಿ.ಎಸ್.ಡಬ್ಲ್ಯೂ ಕೋರ್ಸ್‌ಗಳಿವೆ. ಈ ಪದವಿ ಪಡೆದವರು ಎಂ.ಎಸ್.ಡಬ್ಲ್ಯೂ. ಹೊರತುಪಡಿಸಿ ಬೇರೆ ಕೋಸ್‌ಗಳನ್ನು ಅಧ್ಯಯನ ಮಾಡಲಾಗುವುದಿಲ್ಲ. ಆದರೆ, ವಿಶ್ವವಿದ್ಯಾಲಯದ ಎಂ.ಎಸ್.ಡಬ್ಲ್ಯೂ., ಕೋರ್ಸ್‌ಗೆ ಬಿ.ಎಸ್.ಡಬ್ಲ್ಯೂ ಪದವಿ ಪಡೆದವರಿಗೆ ಶೇ.50ರಷ್ಟು ಹಾಗೂ ಉಳಿದ ಪದವಿ ಪಡೆದವರಿಗೆ ಶೇ.50ರಷ್ಟು ಸೀಟುಗಳನ್ನು ನೀಡಲಾಗುತ್ತಿದೆ. ಈ ಕ್ರಮದಿಂದಾಗಿ ಬಿ.ಎಸ್.ಡಬ್ಲ್ಯೂ. ಪದವಿ ಪಡೆದ ಹಲವಾರು ವಿದ್ಯಾರ್ಥಿಗಳು ಹೆಚ್ಚಿನ ಅಂಕ ಗಳಿಸಿದ್ದರೂ ಕೂಡ ಸ್ನಾತಕೋತ್ತರ ಅಧ್ಯಯನದಿಂದ ವಂಚಿತರಾಗುತ್ತಿದ್ದಾರೆ. ಆದುದರಿಂದ, ಸೀಟು ಹಂಚಿಕೆ ವಿಧಾನವನ್ನು ಪರಿಷ್ಕರಿಸಿ, ಬಿ.ಎಸ್.ಡಬ್ಲ್ಯೂ., ಪದವಿ ಪಡೆದವರಿಗೆ ಎಂ.ಎಸ್.ಡಬ್ಲ್ಯೂ. ಪ್ರವೇಶದಲ್ಲಿ ಮೊದಲ ಆದ್ಯತೆ ನೀಡಬೇಕು. ಬಿ.ಎಸ್.ಡಬ್ಲ್ಯೂ., ಪದವಿ ಪಡೆದವರು ಲಭ್ಯವಿಲ್ಲದಿದ್ದಾಗ ಮಾತ್ರ ಉಳಿದ ಪದವೀಧರರನ್ನು ಪರಿಗಣಿಸುವ ಕುರಿತು ನಿಯಮ ರೂಪಿಸುವಂತೆ ಕೋರಿದರು.

ಕುಲಸಚಿವರು ಮಾತನಾಡಿ, ಬಿ.ಎಸ್.ಡಬ್ಲ್ಯೂ ಪದವಿ ಪಡೆದವರು ಎಂ.ಎಸ್.ಡಬ್ಲ್ಯೂ. ಪ್ರವೇಶ ವಂಚಿತರಾಗಿರುವ ಬಗ್ಗೆ ಬಹಷ್ಟು ಮನವಿಗಳು ಬಂದಿವೆ. ಆದುದರಿಂದ ಮುಂದಿನ ವರ್ಷದ ಪ್ರವೇಶಕ್ಕೆ



Scanned with OKEN Scanner

ಈ ಸಮಸ್ಯೆಯನ್ನು ಪರಿಹರಿಸಲು ಸೂಕ್ತ ಕ್ರಮ ವಹಿಸುವುದಾಗಿ ಸಭೆಗೆ ತಿಳಿಸಿದರು.

3-ಸಿಂ-7.22(ಎಫ್): ಮಾನ್ಯ ಕುಲಪತಿಯವರು ಮಾತನಾಡುತ್ತಾ, ವಿಶ್ವವಿದ್ಯಾಲಯದ ಘಟಕ ಕಾಲೇಜಾದ ಶಿವಮೊಗ್ಗದ ಸಹ್ಯಾದ್ರಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನವರು ಇತ್ತೀಚೆಗೆ ವಿಶ್ವವಿದ್ಯಾಲಯಕ್ಕೆ ಮನವಿ ಸಲ್ಲಿಸಿ, ಕಾಲೇಜಿನಲ್ಲಿರುವ ವಾಣಿಜ್ಯ ಮತ್ತು ನಿರ್ವಹಣಾಶಾಸ್ತ್ರ ವಿಷಯಗಳ ಸಂಶೋಧನಾ ಕೇಂದ್ರದಲ್ಲಿಯೇ ನೇರವಾಗಿ ಪಿಹೆಚ್.ಡಿ., ಸಂಬಂಧಿತ ಕಾರ್ಯಗಳಾದ ಪ್ರವೇಶಾತಿ, ಸೀಟು ಹಂಚಿಕೆ, ಕೋರ್ಸ್‌ವರ್ಕ್ ತರಗತಿಗಳು ಹಾಗೂ ಪರೀಕ್ಷೆ ಹಾಗೂ Viva ಆಯೋಜನೆ, ಪ್ರಗತಿ ವರದಿಗಳ ಸಲ್ಲಿಕೆ ಮತ್ತು ಮೌಲ್ಯಮಾಪನ, Pre-Ph. D., Collquim ಹಾಗೂ Open Viva Voce Exam ಮತ್ತು ಇನ್ನಿತರ ಪೂರಕ ಪ್ರಕ್ರಿಯೆಗಳನ್ನು ಕಾಲೇಜು ಹಂತದಲ್ಲಿಯೇ ನಿರ್ವಹಿಸಲು ಅವಕಾಶ ಮಾಡಿಕೊಡಬೇಕು ಎಂದು ಕೇಳಿರುತ್ತಾರೆ ಆದರೆ, ಪಿಹೆಚ್.ಡಿ. ಪರಿನಿಯಮದಲ್ಲಿ ಇದಕ್ಕೆ ಅವಕಾಶವಿಲ್ಲ ಎಂದರು. ಡಾ.ಎಂ.ಸ್ವಾಮಿರವರು ಮಾತನಾಡಿ ಪಿಹೆಚ್.ಡಿ., ಪ್ರವೇಶ ಸೇರಿದಂತೆ ಬಹಳಷ್ಟು ಕಾರ್ಯಗಳು ವಿಶ್ವವಿದ್ಯಾಲಯದಲ್ಲಿ ಕೇಂದ್ರೀಕೃತ ವ್ಯವಸ್ಥೆಯಲ್ಲಿ ನಿರ್ವಹಿಸಿದಲ್ಲಿ ಗುಣಮಟ್ಟ ಕಾಯ್ದುಕೊಳ್ಳಲು ಅನುಕೂಲವಾಗುತ್ತದೆ. ಇಲ್ಲವಾದಲ್ಲಿ ಮುಂದೆ ಎಲ್ಲಾ ಸಂಶೋಧನಾ ಕೇಂದ್ರದವರು ಸಹ್ಯಾದ್ರಿ ವಾಣಿಜ್ಯ ಕಾಲೇಜಿನವರ ರೀತಿಯಲ್ಲಿ ಕೇಳಿದರೆ ಪಿಹೆಚ್.ಡಿ., ಸಂಶೋಧನಾ ಪದವಿಯ ಪಾವಿತ್ರತೆ ಉಳಿಸಿಕೊಳ್ಳುವುದು ಕಷ್ಟವಾಗುತ್ತದೆ ಎಂದರು.

ಕುಲಸಚಿವರು ಮಾತನಾಡಿ, ಪಿಹೆಚ್.ಡಿ., ಪರಿನಿಯಮಗಳಲ್ಲಿ ಅವಕಾಲವಿಲ್ಲದಿದ್ದರೆ, ಕಾಲೇಜಿಗೆ ಅನುಮತಿಸಲು ಸಾಧ್ಯವಿಲ್ಲ ಎಂದರು. ಅದರಂತೆ, ಸಹ್ಯಾದ್ರಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನವರು ಕೋರಿರುವಂತೆ, ಕಾಲೇಜಿನಲ್ಲಿಯೇ ನೇರವಾಗಿ ಪಿಹೆಚ್.ಡಿ., ಸಂಬಂಧಿತ ಎಲ್ಲಾ ಕಾರ್ಯಗಳನ್ನು ನಿರ್ವಹಿಸಲು ಅನುಮತಿಸದಿರಲು ಹಾಗೂ ಯಥಾಸ್ಥಿತಿಯಲ್ಲಿ ಮುಂದುವರಿಸಲು ಸಭೆಯು ನಿರ್ಣಯಿಸಿತು.

ಸಭೆಯ ಕೊನೆಯಲ್ಲಿ ಸಿಂಡಿಕೇಟ್ ಸದಸ್ಯತ್ವದ ಅವಧಿ ಮುಗಿದ ಪ್ರಾಂಶುಪಾಲರುಗಳಾದ ಶ್ರೀ ವಿನಯಕುಮಾರ್ ಶೆಟ್ಟಿ, ಕರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಳಸ ಹಾಗೂ ಡಾ.ಎಂ.ಸ್ವಾಮಿ, ಶ್ರೀ ಜೆ.ಸಿ.ಬಿ.ಎಂ. ಕಾಲೇಜು, ಶೃಂಗೇರಿ ಇವರುಗಳನ್ನು ಸನ್ಮಾನಿಸಿ ಬೀಳ್ಕೊಡಲಾಯಿತು. ನಿರ್ಗಮಿತ ಸದಸ್ಯರುಗಳು ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು.

ಅಂತಿಮವಾಗಿ ಸಭೆಗೆ ಆಗಮಿಸಿ ಸೂಕ್ತ ಸಲಹೆ, ಸಹಕಾರ ನೀಡಿದ ಎಲ್ಲಾ ಸದಸ್ಯರುಗಳಿಗೆ ಕುಲಸಚಿವರು ಕೃತಜ್ಞತಾಪೂರ್ವಕವಾಗಿ ವಂದಿಸಿದ ನಂತರ ಸಭೆಯ ಕಲಾಪಗಳು ಮುಕ್ತಾಯವಾದವು.

ಕುಲಸಚಿವರು

ಕುಲಸಚಿವರು
ಕುವೆಂಪು ವಿಶ್ವವಿದ್ಯಾಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

ಸಹಿ/-
ಕುಲಪತಿಗಳು



Scanned with OKEN Scanner